JnanaSudha

# ಜ್ಞಾನಸುಧಾ ಪತ್ರಿಕೆ

ಆಗಸ್ಟ್ – 2023

ಸಂತೃಪ್ತ ಸಮಾಜ ನಿರ್ಮಾಣದ ಕನಸುಗಳೊಂದಿಗೆ

ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳು
ಗಣಿತ ನಗರ, ಕಾರ್ಕಳ
ನಾಗಬನ ಕ್ಯಾಂಪಸ್, ಉಡುಪಿ

ಸಂಚಿಕೆ: 35

## ಜ್ಞಾನಸುಧಾ ಶ್ರೀ ಮಹಾಗಣಪತಿ ದೇವಸ್ಥಾನ ಹತ್ತನೇ ಪ್ರತಿಷ್ಠಾ ಮಹೋತ್ಸವದ ಸಂಭ್ರಮ

### ಪ್ರತಿಭಾ ಪುರಸ್ಕಾರ – 38 ಲಕ್ಷ ವಿದ್ಯಾರ್ಥಿ ವೇತನ ವಿತರಣೆ



ವಿದ್ಯೆಯ ಜೊತೆಗೆ ಬುದ್ದಿ ಇದ್ದರೆ ಪ್ರಪಂಚಕ್ಕೆ ಪೂರಕ – ಶ್ರೀ ವಿದ್ಯಾಪ್ರಸನ್ನ ತೀರ್ಥಸ್ವಾಮಿಜಿ

ಶ್ರೀ ಮಹಾಗಣಪತಿ ದೇವಸ್ಥಾನದ ಹತ್ತನೇ ಪ್ರತಿಷ್ಠಾ ಮಹೋತ್ಸವ ಹಾಗೂ ಜ್ಞಾನಸುಧಾ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಕುಕ್ಕೆ ಸುಬ್ರಹ್ಮಣ್ಯ ಮಠಾಧಿಪತಿ ಶ್ರೀ ವಿದ್ಯಾಪ್ರಸನ್ನ ತೀರ್ಥಸ್ವಾಮಿಜಿ ಉದ್ಘಾಟಿಸಿ ಆಶೀರ್ವಚನವನ್ನು ನೀಡಿದರು. ಕಾರ್ಕಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ವಿ.ಸುನೀಲ್ ಕುಮಾರ್, ಎಳ್ಳಾರೆ ಲಕ್ಷ್ಮೀ ಜನಾರ್ಧನ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ಯೋಗೀಶ ಮಲ್ಯ, ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಸುಧಾಕರ್ ಶೆಟ್ಟಿ, ಎಪಿಜಿಇಟಿ ಟ್ರಸ್ಟಿ ಹಾಗೂ ಬಳ್ಳಾರಿ ಜ್ಞಾನಾಮೃತ ಪಿಯು ಕಾಲೇಜಿನ ಅಧ್ಯಕ್ಷರಾದ ಶ್ರೀಎಂಜಿ.ಗೌಡ್ ಉಪಸ್ಥಿತರಿದ್ದರು.

ದಿವ್ಯವಾದ ಸನ್ನಿಧಾನದಿಂದ ಯಶಸ್ವಿಯಾಗಬಹುದು. ಸಾಧನೆ ಮಾಡುತ್ತಾ ಎತ್ತರಕ್ಕೆ ಏರಬಹುದು. ವಿದ್ಯಾರ್ಥಿ ನಿಂತ ನೀರಾಗಿರದೆ ಬಹುಮುಖವಾಗಿ ಬೆಳೆಯ ಬೇಕು ಎಂಬ ಆಶಯದೊಂದಿಗೆ ಉತ್ತಮ ಪರಿಸರ ಮತ್ತು ಅವಕಾಶಗಳಿಂದ ಜ್ಞಾನದಧಾರೆಯನ್ನು ನೀಡಿ ಪ್ರತಿಭೆಗಳಾವರಣಗೊಳಿಸುತ್ತಿರುವ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಸುಧಾಕರ್ ಶೆಟ್ಟಿಯವರ ಕಾರ್ಯ ಶ್ಲಾಘನೀಯ ಎಂದು ಕುಕ್ಕೆ ಸುಬ್ರಹ್ಮಣ್ಯ ಮಠಾಧಿಪತಿ ಶ್ರೀ ವಿದ್ಯಾಪ್ರಸನ್ನ ತೀರ್ಥಸ್ವಾಮಿಜಿ ಹೇಳಿದರು.



ಶಿಕ್ಷಣ ಕ್ಷೇತ್ರದಲ್ಲಿ ವಿಭಿನ್ನ ವ್ಯಕ್ತಿತ್ವ ಡಾ.ಸುಧಾಕರ್ ಶೆಟ್ಟಿಯವರದ್ದು – ಸುನೀಲ್ ಕುಮಾರ್

ಅಧ್ಯಕ್ಷತೆ ವಹಿಸಿದ ಕಾರ್ಕಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ವಿ.ಸುನೀಲ್ ಕುಮಾರ್‌ರವರು ಶಿಕ್ಷಣ ಕ್ಷೇತ್ರದಲ್ಲಿ ವಿಭಿನ್ನ ವ್ಯಕ್ತಿತ್ವ ಡಾ.ಸುಧಾಕರ್ ಶೆಟ್ಟಿಯವರದು. ಇಷ್ಟು ದೊಡ್ಡ ಪ್ರಮಾಣದ ಪ್ರತಿಭಾಪುರಸ್ಕಾರವನ್ನು ನೀಡುತ್ತಿರುವ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಕಾರ್ಯ ಅಭಿನಂದನೀಯವಾದದ್ದು. ಶಿಕ್ಷಣವೆಂದರೆ ಕೇವಲ ಫಲಿತಾಂಶವಲ್ಲ, ಪದವಿ ಪತ್ರಗಳ ಸಂಗ್ರಹವಲ್ಲ. ಅಂಕಗಳಿಕೆಯು ಅಲ್ಲ. ಶಿಕ್ಷಣದ ಮೂಲಕ ನಮ್ಮೆಲ್ಲರ ಮೌಲ್ಯಗಳನ್ನು ಹೆಚ್ಚು ಮಾಡಿಕೊಳ್ಳುವಂತಾಗಬೇಕು. ಮೌಲ್ಯಗಳೇ ನಮ್ಮ ನಡತೆಗಳಾದಾಗ ನಮ್ಮ ವ್ಯಕ್ತಿತ್ವಕ್ಕೆ ಶೋಭೆ ಬರಲು ಸಾಧ್ಯ ಎಂದರು.

ಇದೇ ಸಂದರ್ಭ ಗಣಿತನಗರದ ನೈವೇದ್ಯಸುಧಾದಲ್ಲಿ ಅಡುಗೆ ಸಹಾಯಕರಾಗಿದ್ದು ಹೃದಯಾಘಾತದಿಂದ ಅಗಲಿದ ಶ್ರೀ ಫ್ರಾನ್ಸಿನ್ ಡಿ'ಸೋಜರವರಿಗೆ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್, ಜ್ಞಾನಸುಧಾ ಹಳೆ ವಿದ್ಯಾರ್ಥಿ ಸಂಘ ಮತ್ತು ಜ್ಞಾನಸುಧಾ ಉಪನ್ಯಾಸಕ ಸಿಬ್ಬಂದಿವರ್ಗದಿಂದ ಕೊಡಮಾಡಿದ 2 ಲಕ್ಷ ರೂಪಾಯಿಯನ್ನು ಅವರ ಧರ್ಮಪತ್ನಿ ಐರಿನ್ ಡಿ'ಸೋಜರವರಿಗೆ ಹಸ್ತಾಂತರಿಸಲಾಯಿತು. ಈ ಹಿಂದೆ ಟ್ರಸ್ಟ್‌ನ ವತಿಯಿಂದ ಶ್ರೀಯುತರಿಗೆ 2 ಲಕ್ಷರೂಪಾಯಿ ನೀಡಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಈ ಮೂಲಕ ಒಟ್ಟು 4ಲಕ್ಷ ರೂಪಾಯಿಯನ್ನು ಜ್ಞಾನಸುಧಾ ಪರಿವಾರದಿಂದ ಹಸ್ತಾಂತರಿಸಲಾಗಿದೆ.

*ಮುಂದಿನ 5ನೇ ಪುಟಕ್ಕೆ*

## ಜ್ಞಾನಸುಧಾದ ಇಬ್ಬರು IIT ಪ್ರವೇಶ



ಧನ್ವಿತ್ ನಾಯಕ್



ಸಮೃದ್ಧ್ ನೆಲ್ಲಿ

ಕಾರ್ಕಳ ಜ್ಞಾನಸುಧಾ ಪ.ಪೂ. ಕಾಲೇಜು ಗಣಿತನಗರದ ಇಬ್ಬರು ವಿದ್ಯಾರ್ಥಿಗಳು ಭಾರತೀಯ ತಂತ್ರಜ್ಞಾನ ಸಂಸ್ಥೆ(ಐ.ಐ.ಟಿ)ಗೆ ಆಯ್ಕೆಯಾಗಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಭಾರತೀಯ ತಂತ್ರಜ್ಞಾನ ಸಂಸ್ಥೆಗಳ (ಐ.ಐ.ಟಿ) ಪ್ರವೇಶಕ್ಕೆ ನಡೆದಿದ್ದ ಜೆ.ಇ.ಇ ಅಡ್ವಾನ್ಸ್‌ನ ಫಲಿತಾಂಶದಲ್ಲಿ ವಿದ್ಯಾರ್ಥಿಗಳಾದ ಧನ್ವಿತ್ ನಾಯಕ್ ಆಲ್ ಇಂಡಿಯಾ (ಜನರಲ್ ಮೆರಿಟ್) 3918ನೇ ರ್‍ಯಾಂಕನ್ನು ಮತ್ತು ಸಮೃದ್ಧ್ ನೆಲ್ಲಿ ಆಲ್ ಇಂಡಿಯಾ (ಜನರಲ್ ಮೆರಿಟ್) 5769ನೇ ರ್‍ಯಾಂಕ್ ಪಡೆದು ಪ್ರತಿಷ್ಠಿತ ಐ.ಐ.ಟಿ ಖರಗ್‌ಪುರಕ್ಕೆ ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ಪ್ರವೇಶಗಿಟ್ಟಿಸಿಕೊಂಡಿದ್ದಾರೆ. ಕೆ.ಸಿ.ಇ.ಟಿ. ಇಂಜಿನಿಯರಿಂಗ್‌ನಲ್ಲಿ ಧನ್ವಿತ್ ನಾಯಕ್ 87ನೇ ರ್‍ಯಾಂಕನ್ನು, ಹಾಗೂ ಸಮೃದ್ಧ್ ನೆಲ್ಲಿ 349ನೇ ರ್‍ಯಾಂಕ್ ಗಳಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

## IISC ಪ್ರವೇಶ



ಅಥಿರಾ ಕೃಷ್ಣ ನಾಯಕ್

ಉಡುಪಿ ಜ್ಞಾನಸುಧಾ ಪದವಿಪೂರ್ವ ಕಾಲೇಜಿನ ಅಥಿರಾ ಕೃಷ್ಣ ನಾಯಕ್ ಬೆಂಗಳೂರಿನ ರಾಷ್ಟ್ರೀಯ ವಿಜ್ಞಾನ ಸಂಸ್ಥೆ (ಐ.ಐ.ಎಸ್.ಸಿ)ಗೆ ಆಯ್ಕೆಗೊಂಡಿದ್ದಾರೆ. ಇವರು ಶ್ರೀ ಕೃಷ್ಣ ನಾಯಕ್ ಮತ್ತು ನವೀನಾ ಬಿ. ದಂಪತಿಗಳ ಸುಪುತ್ರಿಯಾಗಿದ್ದಾಳೆ. ಈಕೆ ಈಗಾಗಲೆ 2023ರ ಸಾಲಿನ ನೀಟ್ ಫಲಿತಾಂಶದಲ್ಲಿ 646 ಅಂಕ ಗಳಿಸಿ ಬೆಂಗಳೂರು ಮೆಡಿಕಲ್ ಕಾಲೇಜಿಗೆ ಅರ್ಹತೆಯನ್ನು ಗಿಟ್ಟಿಸಿಕೊಂಡಿರುವುದರ ಜೊತೆಗೆ, ದ್ವಿತೀಯ ಪಿ.ಯು.ಪರೀಕ್ಷೆಯಲ್ಲಿ ಗಣಿತ ವಿಷಯದಲ್ಲಿ 100 ಕ್ಕೆ 100 ಅಂಕಗಳನ್ನು ಶೇಕಡಾ 95.33% ಫಲಿತಾಂಶವನ್ನು ಗಳಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

## ಸಂಸ್ಥಾಪಕರ ಸಂಸ್ಮರಣೆ – ನುಡಿನಮನ



ದಿ.ಗೋಪಾಲ ಶೆಟ್ಟಿ

ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳೆಂಬ ವಿದ್ಯಾವೃಕ್ಷವನ್ನು ಬೃಹತ್ತಾಗಿ ಬೆಳೆಸಬೇಕೆಂಬ ಕನಸನ್ನು ಅಡಕವಾಗಿಸಿಕೊಂಡ ಬೀಜ ಮೊಳಕೆಯೊಡೆವಲ್ಲಿ ಪ್ರೇರಣಾ ಶಕ್ತಿಯಾಗಿ, ಸುತನ ಸತ್ಕಾರ್ಯಕ್ಕೆ ಬೆಂಬಲವಾಗಿ ನಿಂತು ಬೆನ್ನು ತಟ್ಟಿ, ಸಂಸ್ಥೆಗಳು ಸಾಧನೆಯ ಹಾದಿಯನ್ನು ಕ್ರಮಿಸುತ್ತಾ ಮುಂದುವರೆಯುವಲ್ಲಿ ಮಹೋನ್ನತ ಪಾತ್ರವನ್ನು ವಹಿಸಿದವರು ಗೋಪಾಲ ಶೆಟ್ಟಿಯವರು. ಜ್ಞಾನ, ಸಂಶೋಧನೆ ಮತ್ತು ಮೌಲ್ಯಗಳ ಭದ್ರಬುನಾದಿಯ ಮೇಲೆ ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆನ್ನುವ ಡಾ.ಸುಧಾಕರ ಶೆಟ್ಟಿಯವರ ದೂರದೃಷ್ಟಿಯ ಸದಾಲೋಚನೆಯನ್ನು ಬೆಂಬಲಿಸಿ ಮುಂದಡಿ ಇಡುವ ಮಾರ್ಗದರ್ಶನ ನೀಡಿದ ಜೀವ, ಹಸಿರು ಬೆಳೆಸಿ ಉಸಿರು ಹಸನಾಗಿಸಿದ ಕಾಯಕ ಯೋಗಿ ಗೋಪಾಲ ಶೆಟ್ಟಿಯವರು.

ಆಗಸ್ಟ್ 21, 1921 ಗೋಪಾಲ ಶೆಟ್ಟಿಯವರ ಜನ್ಮದಿನ. ಕಣ್ಣಿಗೆ ಕಾಣುವ ದೇವರಾದ ಮಾತಪಿತರ ಹೆಸರು ಹಾಗೂ ಹುಟ್ಟಿದ ಊರಿನ ಹೆಸರನ್ನು ಒಳಗೊಂಡ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಆಡಳಿತಕ್ಕೆ ಒಳಪಟ್ಟ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳು ಆಗಸ್ಟ್ 21ನ್ನು ಸಂಸ್ಥಾಪಕರ ದಿನವನ್ನಾಗಿ ಆಚರಿಸುತ್ತಾ ಬಂದಿವೆ. "ಹಳೆಬೇರು ಹೊಸಚಿಗುರು ಕೂಡಿರಲು ಮರ ಸೊಬಗು" ಎಂಬ ಮಾತಿನಂತೆ ಹಿರಿಯರ ಜೀವನ ಕ್ರಮದ ಆದರ್ಶವನ್ನು ಅನುಸರಿಸುತ್ತಾ ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ಕ್ಷೇತ್ರಗಳಲ್ಲಿ ಜ್ಞಾನಸುಧಾ ವಿಶಿಷ್ಟ ಸಾಧನೆಯನ್ನು ಮಾಡುತ್ತಾ ಬಂದಿದೆ.

96ರ ಹರೆಯದಲ್ಲಿ ಇಹಲೋಕವನ್ನು ತ್ಯಜಿಸಿದರೂ, ಗೋಪಾಲ ಶೆಟ್ಟಿಯವರ ಸರಳ ಸಜ್ಜನಿಕೆಯ, ಕಾಯಕದಲ್ಲಿ ಕೈಲಾಸ ಕಂಡ, ನೇರ ನಡೆ ನುಡಿ ವ್ಯಕ್ತಿತ್ವದ ಆದರ್ಶ ಜ್ಞಾನಸುಧಾದ ಅಭ್ಯುದಯದ ಅಡಿಪಾಯವಾಗಿ ಸದಾಕಾಲ ನಿಲ್ಲುತ್ತದೆ. ಸಂಸ್ಥಾಪಕರ ದಿನದ ಶುಭಸಂದರ್ಭದಲ್ಲಿ ಗೋಪಾಲಶೆಟ್ಟಿಯವರಿಗೆ ನುಡಿನಮನ ಸಲ್ಲಿಸುತ್ತಿದ್ದೇವೆ.

– ಜ್ಞಾನಸುಧಾ ಬಳಗ

**JnanaSudha**

*On the occasion of*

**FOUNDER'S DAY**

***Felicitation to***

**Anganavadi teachers & Mid-Day meal workers.**
**Financial assistance to Hospital, orphanages & Patients.**

*On 21 August 2023 at 3.00 pm*
*At Ganit Nagar Campus.*

*Guests of Honour*



**Dr. Sanjay Kumar .K.R.**
*M.B.B.S.DGO, DNB.*
(Unit chief, dept of OBG.,
Dr.TMA Pai Rotaty Hospital Karkala)



**Rtn. Abhinandan Shetty.**
(Past District Governor,
Rotary dist. 3182)

*All are cordially invited*

**Ajekar Padma Gopal Education Trust (R.)**
Ganit Nagar, Kukkundoor, Karkala 576117

**JnanaSudha Institutions**
Ganit Nagar, Karkala & Naagabana Campus, Udupi

## ಸುಧಾಭಿನಂದನೆಗಳು



**ಶ್ರೀ ದಿನೇಶ್ ಎಂ ಕೊಡವೂರ್**
ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳು, ಗಣಿತ ನಗರ
ಪ್ರಾಂಶುಪಾಲರು, ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಕಾಲೇಜು, ಗಣಿತ ನಗರ

ಸಂಸ್ಥೆಯಲ್ಲಿ ತನ್ನ ನೇರ ನಡೆ, ನುಡಿಗಳಿಂದ ಕಾರ್ಯದಕ್ಷತೆಗೆ ಹೆಸರುವಾಸಿಯಾಗಿ ಇದೀಗ ಉಡುಪಿ ಜಿಲ್ಲಾ ಅನುದಾನಿತ ಮತ್ತು ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘದ ಅಧ್ಯಕ್ಷರಾಗಿ ಆಯ್ಕೆಗೊಂಡ ತಮಗೆ

**ಹಾರ್ದಿಕ ಅಭಿನಂದನೆಗಳು.**

ಜ್ಞಾನಸುಧಾ ಪರಿವಾರ

## 105 Students who scored KCET 2023 rank within 5000



| | | | | | |
|---|---|---|---|---|---|
| ENGG. 68 | ENGG. 87 | ENGG. 325 | ENGG. 341 | ENGG. 349 | ENGG. 353 |
| **PRANAV GUJJAR** | **DHANVITH NAYAK** | **SHREYAS R GOWDA** | **PRABHANJAN S BABU** | **SAMRUDH NELLI** | **SURYA V** |
| B.Phar. 202 \| Bsc.Agri. 6 | B.Phar. 276 | | B.Phar. 834 | | Bsc.Agri. 229 |
| Vet. 134 \| BNYS : 100 | | | | | Vet. 969 \| BNYS : 860 |



| | | | | | |
|---|---|---|---|---|---|
| ENGG. 370 | ENGG. 420 | ENGG. 499 | ENGG. 623 | ENGG. 631 | ENGG. 644 |
| **SAI LIKITH REDDY V** | **VAISHNAVI S MOHARER** | **CHIRAG R NAYAK** | **ROHITH HEGDE** | **AMITH U NAYAK** | **DHRUVA P BANDRAKALLI** |
| Bsc.Agri. 441 | B.Phar. 335 \| Bsc.Agri. 97 | B.Phar. 719 \| Bsc.Agri. 108 | B.Phar. 265 \| Bsc.Agri. 105 | | B.Phar. 631 \| Bsc.Agri. 163 |
| | Vet. 229 \| BNYS : 189 | Vet. 502 \| BNYS : 340 | Vet. 163 \| BNYS : 112 | | Vet. 431 \| BNYS : 289 |



| | | | | | |
|---|---|---|---|---|---|
| ENGG. 652 | ENGG. 691 | ENGG. 711 | ENGG. 751 | ENGG. 807 | ENGG. 809 |
| **TUSHAR J MOOLYA** | **SAMYAK RAO** | **M P PREETHAM** | **HEMASHREE V M** | **KEERTHANA H BHAT** | **PRATHEEKSHA PAI** |
| B.Phar. 673 \| Bsc.Agri. 215 | | | Bsc.Agri. 211 \| BNYS : 802 | | |
| Vet. 536 \| BNYS : 286 | | | | | |



| | | | | | |
|---|---|---|---|---|---|
| ENGG. 816 | ENGG. 844 | ENGG. 897 | ENGG. 921 | ENGG. 962 | ENGG. 976 |
| **TILAKH RAO** | **N JEEVAN REDDY** | **AMOGHA S R** | **PRATEEKSHA V MALLUR** | **VISHWAS M** | **SHANKAR PATEL K U** |
| B.Phar. 250 \| Bsc.Agri. 233 | | B.Phar. 698 \| Bsc.Agri. 308 | B.Phar. 806 \| Bsc.Agri. 236 | Bsc.Agri. 246 | |
| Vet. 181 \| BNYS : 153 | | Vet. 533 \| BNYS : 494 | Vet. 584 \| BNYS : 387 | Vet. 710 \| BNYS : 668 | |



| | | | | | |
|---|---|---|---|---|---|
| ENGG. 1004 | ENGG. 1072 | ENGG. 1104 | ENGG. 1133 | ENGG. 1219 | ENGG. 1226 |
| **RAHUL R. DANANNAVAR** | **NISHANTH N HEGDE** | **SUHAS V K** | **ARHAN A K** | **AMULYA SHETTY** | **SHREERAM GAJANAN PATGAR** |
| B.Phar. 430 \| Bsc.Agri. 245 | | B.Phar. 553 \| Bsc.Agri. 306 | | B.Phar. 693 \| Bsc.Agri. 413 | |
| Vet. 288 \| BNYS : 242 | | Vet. 392 \| BNYS : 384 | | Vet. 511 \| BNYS : 630 | |



| | | | | | |
|---|---|---|---|---|---|
| ENGG. 1347 | ENGG. 1387 | ENGG. 1430 | ENGG. 1514 | ENGG. 1552 | ENGG. 1569 |
| **ULLAS J JOGIHALLI** | **SATVIK B C** | **MOHITH V** | **M R YASHAS REDDY** | **SHREEKANTH H** | **AMRUTGOUDA MALAGOUDA PATIL** |
| Bsc.Agri. 369 | | | Bsc.Agri. 355 | Bsc.Agri. 795 | Bsc.Agri. 567 |
| Vet. 706 \| BNYS : 585 | | | Vet. 783 \| BNYS : 551 | | |



| | | | | | |
|---|---|---|---|---|---|
| ENGG. 1615 | ENGG. 1674 | ENGG. 1717 | ENGG. 1756 | ENGG. 1831 | ENGG. 1833 |
| **SHREEVARDHAN SHENOY** | **POORVI NAVEEN** | **SHREYAS D** | **CHETAN C PATIL** | **SATHVIK A R** | **NAVAJYOTH** |
| | Bsc.Agri. 475 \| Vet. 979 | B.Phar. 939 \| Bsc.Agri. 780 | B.Phar. 561 \| Bsc.Agri. 558 | | |
| | | Vet. 750 | Vet. 399 \| BNYS : 439 | | |



| | | | | | |
|---|---|---|---|---|---|
| ENGG. 1889 | ENGG. 2032 | ENGG. 2065 | ENGG. 2075 | ENGG. 2191 | ENGG. 2224 |
| **DHANUSH M HEGDE** | **HRUSHIK M HEGDE** | **PRUTHVI R HEGDE** | **ATHIRA KRISHNA NAYAK** | **SMAYA SADANAND MABEN** | **K KHUSHI SHETTY** |
| | | | Bsc.Agri. 603 | | Bsc.Agri. 576 |
| | | | Vet. 709 \| BNYS : 564 | | BNYS : 667 |



| | | | | | |
|---|---|---|---|---|---|
| ENGG. 2236 | ENGG. 2240 | ENGG. 2263 | ENGG. 2347 | ENGG. 2351 | ENGG. 2367 |
| **SHREYAS R ACHAR** | **CHANDAN D PRABHU** | **BHARATH CHOWDARY K B** | **AMITH KUMAR A** | **SHAMANTH B N** | **JANVI M SHETTY** |
| | Bsc.Agri. 779 | | | | |

## ವಂದಿಸು ನೀ ಗುರುವಿಗೆ

ಗುರುವಿಗೆ ಶರಣಾಗು ನೀ ಗುರುವಿಗೆ
ಬದುಕಿನ ಶಿಸ್ತನ್ನು ಕಲಿಸಿದ ಗುರುವಿಗೆ
ಗುರುವಿಗೆ ವಂದಿಸು ನೀ ಗುರುವಿಗೆ
ಬದುಕಿನ ರೀತಿಯನ್ನು ಕಲಿಸಿದ ಗುರುವಿಗೆ
ಗುರುವನ್ನು ಸ್ಮರಿಸು ನೀ ಗುರುವನ್ನು
ಅಮ್ಮನ ಹಾಗೆ ಮಮತೆಯನಿತ್ತ ಗುರುವನ್ನು
ಗುರುವನ್ನು ನೆನೆ ನೀ ಗುರುವನ್ನು
ಅಪ್ಪನ ಹಾಗೆ ಗದರಿ ತಿಳಿ ಹೇಳಿದ ಗುರುವನ್ನು
ಮರೆಯ ಬಾರದು ಮನುಜ ನೀ
ನಡೆದು ಬಂದ ದಾರಿಯನು
ಮೇಲೇರಲು ಬಳಸಿದ ಏಣಿಯನ್ನು
ಕುಗ್ಗಿದಾಗ ಪಡೆದ ಹೆಗಲಿನ ಸಹಾಯವನ್ನು

ರಚನೆ : **ಇಂಧುಶ್ರೀ ಯು. ಶೆಟ್ಟಿ**
ಪ್ರಥಮ ಪಿ.ಯು.ಸಿ. ವಿಜ್ಞಾನ ವಿಭಾಗ

## ಜ್ಞಾನದ ಸಾರಥಿ ಬದುಕಿಗೆ ಆರತಿ

ನನ್ನ ಏಳು ಬೀಳುಗಳಲ್ಲಿ ಜೊತೆಗೆ ಇದ್ದು
ಸೋತಾಗ ಸಂತೈಸಿ ಗೆದ್ದಾಗ ಪ್ರಶಂಸಿಸಿ
ನನ್ನಲ್ಲಿ ಉತ್ಸಾಹ, ಚೈತನ್ಯ,
ಧೈರ್ಯ ತುಂಬುವ ಶಕ್ತಿ ನೀವು

ಯಾವ ಸಂಬಂಧವೂ ಇಲ್ಲದಿದ್ದರೂ
ಸದಾ ನಮ್ಮ ಒಳಿತಿಗಾಗಿ ಶ್ರಮಿಸುವವರು ನೀವು

ಅವಿದ್ಯಾವಂತಿಕೆ ಎಂಬ ಹಸಿವಿನಿಂದ ಬಳಲುವವರಿಗೆ
'ವಿದ್ಯೆ' ಎಂಬ ಅನ್ನವನ್ನು ನೀಡಿ
'ಅಜ್ಞಾನ' ಎಂಬ ಬಿಸಿಲಿನಲ್ಲಿ ಬೇಯುವವರಿಗೆ
'ಜ್ಞಾನ' ಎಂಬ ನೆರಳು ನೀಡುವ ಮೇರು
ವ್ಯಕ್ತಿತ್ವ ನಿಮ್ಮದು

ಈ ಭೂಮಿ ಮೇಲಿರುವ ಎಲ್ಲಾ ಪ್ರತಿಭೆಗಳ ಶಿಲ್ಪಿ ನೀವು
ವಿದ್ಯಾರ್ಥಿಗಳ ಭವಿಷ್ಯದ ಬದುಕಿನ ಆಧಾರ ನೀವು
ಅನಕ್ಷರತೆಯನ್ನು ಹೋಗಲಾಡಿಸುವ ಸರದಾರ ನೀವು
ವಿದ್ಯಾರ್ಥಿಗಳಿಗೆ ತಿಳುವಳಿಕೆಯ ಬೆಳಕು ನೀಡುವ
ಭಾಸ್ಕರ ನೀವು

ನಿಮ್ಮ ಪಾಂಡಿತ್ಯದ ಹಿರಿಮೆ, ನಮಗೆ ಶಿಸ್ತಿನ ಗರಿಮೆ
ಮಕ್ಕಳ ಜೀವನದ ಸಾರಥಿ, ಆಗುವಿರಿ ನಮಗೆ
ಆದರ್ಶ ಮೂರ್ತಿ
ನಾವು ತರುವೆವು ನಿಮ್ಮ ಹೆಸರಿಗೆ ಕೀರ್ತಿ

ರಚನೆ : **ಅಕ್ಷರಿ.ಎ.ಆರ್**
ದ್ವಿತೀಯ ಪಿ.ಯು.ಸಿ., ವಿಜ್ಞಾನ ವಿಭಾಗ

## TO A BEAUTIFUL SOUL

You are beautiful, and I don't
Mean beautiful like the creatures
You see walk down a runway,
Or the ones you see in films, or
In the cover of magazines
These are all temporary and will
soon fade away

You are beautiful because of your
Heart, you are beautiful because of
How your mind weird
You are beautiful for how you think
For how you reason out, for how
See everything different
You are beautiful for seeing the
Goodness in others, for being
Patient and for being kind

You are so much beautiful when you
Talk about the things you love
With so much passion and so much
Hope, you are so beautiful when
You are creating your art, you
Are so beautiful when you speak
of your dreams and visions for
The future, you are so beautiful
No matter what!

You are beautiful when you make
Other people laugh, you are beautiful
When you inspire others to keep going
Forward in a world that's broken and
exhausting
Don't forget you are amazing and
Beautiful because the universe
Made you exactly to be how you are today!

**SANVI SHETTY**, I PCMB

## 105 Students who scored KCET 2023 rank within 5000



ENGG. 2414 — TANMAYA G SHETTY
ENGG. 2449 — PRANEET V MAHENDRAKAR
ENGG. 2479 — DEEKSHITH M
ENGG. 2484 — RITHVIK D C, Bsc.Agri. 767
ENGG. 2511 — KOMALA H S, Bsc.Agri. 747
ENGG. 2514 — UDBHAV THOLAR, Bsc.Agri. 754, BNYS : 909



ENGG. 2644 — RAKSHITA A NAIK
ENGG. 2859 — SAMRUDH N SHINDHE
ENGG. 2907 — YASHWANTH S
ENGG. 2924 — S A PRANAV
ENGG. 2960 — AADHYA ROHISH
ENGG. 3035 — SAPTHAMI UPADHYA



ENGG. 3037 — G S SHREYA, Bsc.Agri. 814
ENGG. 3075 — VINEET A BHATKAL
ENGG. 3090 — BHUVANDEEP SHETTY
ENGG. 3101 — SRISHTI S SHETTY
ENGG. 3252 — SRISHTI SHETTY
ENGG. 3264 — YATHISH SHANBHAG



ENGG. 3303 — NAIK MADHAVI R
ENGG. 3380 — TRISHA KANTH
ENGG. 3398 — VAIBHAV
ENGG. 3451 — ISHAAN G UMARANI
ENGG. 3454 — SAHANA AMAR KURALI
ENGG. 3465 — HARSHA D, Vet. 999 | BNYS : 786



ENGG. 3567 — PRAJNAN VAIDYA
ENGG. 3655 — KRUTHIKA S B
ENGG. 3722 — PRATHVIK SHETTY
ENGG. 3758 — VIGNESH B NAYAK
ENGG. 3828 — SAGAR BENACHINAMARDI
ENGG. 3851 — P PRERANA ACHARYA



ENGG. 3900 — SUNIDHI KINI
ENGG. 3989 — MANVITH H T
ENGG. 3992 — MAHENDRA REDDY C N
ENGG. 4059 — SRINIDHI V
ENGG. 4068 — HITESH R NAIK
ENGG. 4107 — PRANAM PRABHU



ENGG. 4158 — AADYA DAYANAND NAIK
ENGG. 4428 — DHARSHAN G GOWDA M R
ENGG. 4443 — NINAD N KULAL
ENGG. 4573 — SHREYA C ANGADI
ENGG. 4581 — K VASUDHA PAI
ENGG. 4640 — HRISHIKA D RAI



ENGG. 4710 — TRIGUN G TAMRAGOURI
ENGG. 4717 — SUHAS SIDDAPPA JOLAD
ENGG. 4719 — IRAM ILYAS SHIEK
ENGG. 4724 — POORVI ISHWAR SIDNAL
ENGG. 4768 — CHIRAYU B M
ENGG. 4808 — SOHAN SHETTY



ENGG. 4957 — NAVYA DINESH SHETTY
ENGG. 4974 — VISHAL M V
ENGG. 4987 — S HEMANTHRAJ

## ನಾನು

ನಾನು ನಾನೆಂದು ನೊಂದು ನರಳುವ ನರನೇ,
ನಾನೆಂಬ ನರಕದಿ ನೆರಳಿಲ್ಲದೆ;
ನನ್ನದೆಂಬ ನ್ಯಾಯವಲ್ಲದ ನೆಲದ ನಕ್ಷೆಯೊಳು,
ನನ್ನದಲ್ಲ ನಮ್ಮದೆಂಬ ನೀತಿಯನರಿತು:
ನಗುನಗುತ ನಲಿದೊಡೆ ನನ್ನಾಣೆ,
ನೃಪನಾಗುವೆನೆಂದಿದ್ದಾನಯ್ಯ ನಾರಾಯಣ.

ರಚನೆ : **ಉತ್ಸವ್ ಎಂ. ಶ್ರೀವತ್ಸ,** ಪ್ರಥಮ ಪಿ.ಯು.ಸಿ. ವಿಜ್ಞಾನ ವಿಭಾಗ

## ODDS AND YOUNGS

What is love?
Is it the bare minimum exchange of flowers
Or, is the way your mother assures
Your blanket is fully covered ?

What is achievement?
Is it the number of zeroes in your
bank balance
Or, is it the number of sorrows
your heart carries?

What is potential?
Is it the way a wild flower
Wants to be a fancy one
Or, is it how high people
Climb to see a wild flower?

What is happiness?
Is it owning a golden plate,
Or, is it completely digesting
Whatever you are having
In your paper plate?

What is heaven?
Is it somewhere you reach once you die
Because of your good deeds,
Or, is it a place that can be created
Within your existence through your
good deeds?

What is life?
Is it just how long you live for,
Or, is it how vast your experiences can
Come from?

**ANKITHA,** I PCMB

## ಪರಿಸರ

ನಮ್ಮ ಪರಿಸರ ಎಷ್ಟು ಚೆಂದ
ಅದನ್ನು ವರ್ಣಿಸಲು ನಮಗೆ ಆನಂದ
ಚಿತ್ರಿಸಲಾಗದಷ್ಟು ಅಂದ
ಎಷ್ಟು ಸುಂದರವಾದ ಬಂಧ
ಎತ್ತ ನೋಡಿದರೂ ಗಿಡ ಮರಗಳು
ಅದರಲ್ಲಿ ಜೀವಿಸುವ ಪ್ರಾಣಿ ಪಕ್ಷಿಗಳು
ಪಕ್ಷಿಗಳ ಇಂಪಾದ ಧ್ವನಿಗಳು
ಕೇಳಿ ಹರುಷಗೊಳ್ಳುತ್ತಿದ್ದವು ಎಲ್ಲರ ಮನಗಳು
ಆಗ ಬಂದನು ಮನುಜ ರಾಯನು
ಅಲ್ಲಿರುವುದೆಲ್ಲವನ್ನು ತನ್ನದೆಂದನು
ಕಡಿದನು ಮರಗಳನ್ನು
ಕಟ್ಟಿದನು ಮನೆಯೊಂದನ್ನು
ಕೊಂದನು ಪ್ರಾಣಿಗಳನ್ನು
ಬೆಳೆಸಿದನು ನಾಡನ್ನು
ನಿರ್ಮಿಸಿದನು ನಗರಗಳನ್ನು
ತಂದನು ವಾಹನಗಳನ್ನು
ತಯಾರಿಸಿದನು ಧೂಮಗಳನ್ನು
ಹಾಳು ಮಾಡಿದನು ಪರಿಸರವನ್ನು
ತೋರಿಸಿದನು ವಾಸ್ತವವನ್ನು
ಮರೆತು ಬಿಟ್ಟನು ಭೂಮಿ ತಾಯನ್ನು
ಆದರೆ....
ಇಂದಿಗೂ ಭೂಮಿ ತಾಯಿ ಇಟ್ಟಿದ್ದಾಳೆ ನಂಬಿಕೆಯನ್ನ
ನಾವು ಮಾಡಿದರೆ ಮನಸ್ಸನ್ನು
ಮತ್ತೆ ಕಟ್ಟಬಹುದು ಪರಿಸರವನ್ನು

ರಚನೆ : **ಶ್ರೀ ದೀಕ್ಷಾ**
ದ್ವಿತೀಯ ಪಿ.ಯು.ಸಿ., ವಿಜ್ಞಾನ ವಿಭಾಗ

## ಜೀವನ ಸಂತೆ

ಬದುಕಿ ನಿಮ್ಮ ಬದುಕನ್ನು ಮನಸ್ಸಿಗೆ ಬಂದಂತೆ
ಚಿಂತೆ ಎಂಬುದು ಕಟ್ಟಿ ಮುಗಿಯದ ಸಾಲದಂತೆ,
ಬಿಟ್ಟು ಬಿಡಿ ನೆಮ್ಮದಿಯ ಕೆಡಿಸುವ ಚಿಂತೆ
ಜೀವನ ಎಂಬುದು ಸದಾ ಚಲಿಸುವ ಬಂಡಿಯಂತೆ
ಬಿಟ್ಟು ಬಿಡಿ ಅದರ ಅಂತೆ ಕಂತೆ
ಇರಲಿ ಬದುಕಿನಲಿ ನಗುವಿನ ಸಂತೆ !!

**ಹೇಮಂತ್ ಕಾಮತ್**
ಗಣಿತಶಾಸ್ತ್ರ ಉಪನ್ಯಾಸಕರು,
ಕಾರ್ಕಳ ಜ್ಞಾನಸುಧಾ.

# 91 Students who secured MBBS Seats in the FIRST ROUND allotment of NEET - 2023




**ATHIRA KRISHNA NAYAK**
*Percentile :* **99.59884**
BMC Bengaluru
MBBS - Govt.

**DHRUVA P BANDRAKALLI**
*Percentile :* **99.40385**
VIMS Bellary
MBBS - Govt.

**ROHITH HEGDE**
*Percentile :* **99.23016**
SIMS Shimoga
MBBS - Govt.

**CHETAN C PATIL**
*Percentile :* **99.23016**
VIMS Bellary
MBBS - Govt.

**ANKITHA P ACHARYA**
*Percentile :* **99.07991**
MMC Mysore
MBBS - Govt.

**VISHWAS M**
*Percentile :* **99.04459**
SIMS Shimoga
MBBS - Govt.




**AMULYA SHETTY**
Fr. Muller Med. College Mangalore
MBBS - Govt.

**VAISHNAVI S MOHARER**
SIMS Shimoga
MBBS - Govt.

**KANNIKA K J**
Mandya Medical College
MBBS - Govt.

**TRISHA KANTH**
SIMS Shimoga
MBBS - Govt.

**M R YASHAS REDDY**
BIMS Belgaum
MBBS - Govt.

**ANU B GEORGE**
Fr. Muller Med. College Mangalore
MBBS - Govt.




**CHIRAG R NAYAK**
SIMS Shimoga
MBBS - Govt.

**TILAKH RAO**
VIMS Bellary
MBBS - Govt.

**RAHUL R DANANNAVAR**
SIMS Shimoga
MBBS - Govt.

**TUSHAR J MOOLYA**
SIMS Shimoga
MBBS - Govt.

**SUHAS V K**
GIMS Gadag
MBBS - Govt.

**G KARUNYA**
GIMS Gadag
MBBS - Govt.




**VAMSHI SHETTY**
AJIMS Mangalore
MBBS - Govt.

**AMOGHA S R**
Adichunchanagiri Inst. of Med. Sciences Mandya
MBBS - Govt.

**G S SHREYA**
CIMS Chamarajnagar
MBBS - Govt.

**AMRUTGOUDAM PATIL**
SDM Dharwad
MBBS - Govt.

**SATWIK G ACHARYA**
KMC Mangalore
MBBS - Govt.

**VIVINA NAZARETH**
AJIMS Mangalore
MBBS - Govt.




**CHETAN PRASHANTH**
Adichunchanagiri Inst. of Med. Sciences Mandya
MBBS - Govt.

**PRASANNA M HANJE**
CIMS Chikkamagaluru
MBBS - Govt.

**SINDHUBHAT**
SSIMS Davangere
MBBS - Govt.

**S A PRANAV**
YMC Mangalore
MBBS - Govt.

**PRATEEKSHAV M**
CIMS Chikkaballapura
MBBS - Govt.

**MAANVI PADIVAL**
YMC Mangalore
MBBS - Govt.




**MANVITH H T**
KIMS Madikeri
MBBS - Govt.

**POORVI ISHWAR SIDNAL**
SNMCRC Bagalkot
MBBS - Govt.

**MADAN G K**
SSIMS Davangere
MBBS - Govt.

**DHARSHAN GANGE GOWDA M R**
SSIMS Davangere
MBBS - Govt.

**SHREYAS D**
AJIMS Mangalore
MBBS - Govt.

**POORVI NAVEEN**
Fr. Muller Med. College Mangalore
MBBS - Govt.




**HARIPRIYA**
CIMS Chamarajanagar
MBBS - Govt.

**HEMASHREE V M**
CMCR Chitradurga
MBBS - Govt.

**ULLAS JAGADEESH JOGIHALLI**
SMC Shimoga
MBBS - Govt.

**K KHUSHI SHETTY**
SMC Shimoga
MBBS - Govt.

**IRAMILYAS SHIEK**
KIMS KOPPAL
MBBS - Govt.

**GOUTHAM S**
CIMS Chikkamagaluru
MBBS - Govt.




**HARSHA D**
SMCR Tumakuru
MBBS - Govt.

**SAGAR B**
SDM Dharwad
MBBS - Govt.

**BHUVANDEEP SHETTY**
NMC Raichur
MBBS - Govt.

**H M AYUSH GOWDA**
EPCMSRC Bangalore
MBBS - Govt.

**SHREEKANTH H**
SSIMS Davangere
MBBS - Govt.

**SHISHIR K**
SIMS Shimoga
MBBS - Govt.




**PRATHEEK N K**
KIMSRC Mangalore
MBBS - Govt.

**KRUTHIKA S B**
Al-Ameen Medical College
VIJAYAPUR
MBBS - Govt.

**UDBHAV THOLAR**
EPCMSRC Bangalore
MBBS - Govt.

**RITHVIK D C**
Oxford Medical College
Bangalore
MBBS - Govt.

**ARUNDHATI G V**
SSIMS Davangere
MBBS - Govt.

**HITESH R NAIK**
KIMS Hubli
MBBS - Govt.

## ಸಾಧನೆಯ ಸವಾಲು

ಸಾಧನೆ ಸಾಧಕನ ಸ್ವತ್ತೇ ಹೊರತು, ಸೋಮಾರಿಯ ಸ್ವತ್ತಲ್ಲ. ಸಾಧನೆಗೆ ಅಸಾಧ್ಯವಾದುದೂ ಯಾವುದೂ ಇಲ್ಲ. ಸಾಧಿಸುವ ಛಲ ನಮಗಿರಬೇಕು. "Nothing is impossible, itself says I'm possible"ಎನ್ನುವಂತಹ ಮಾತುಗಳನ್ನು ಕೇಳುತ ಬೆಳೆದ ನಾವುಗಳು 10 ನೇ ತರಗತಿ ಮುಗಿಸಿ 11 ನೇ ತರಗತಿಯ ವಿದ್ಯಾಭ್ಯಾಸಕ್ಕಾಗಿ ಹಾಸ್ಟೆಲ್ ಜೀವನಕ್ಕೆ ಪಾದಾರ್ಪಣೆ ಮಾಡಿದ್ದಾಯ್ತು. ಸರ್ವ ಸ್ವತಂತ್ರ ಮನೆಯಿಂದ ಪರತಂತ್ರದ ಹಾಸ್ಟೆಲ್‌ಗೆ ಬಂದು ಒಗ್ಗಿಕೊಳ್ಳಲು ತುಸು ಸಮಯ ಬೇಕಾಗುತ್ತದೆ. ಎಲ್ಲರನ್ನೂ ತೊರೆದು ಬಂದಾಗ ಅವರ ನೆನಪುಗಳು ಇನ್ನಷ್ಟು ಹತ್ತಿರವಾಗಿ ನಮ್ಮನ್ನು ಕಾಡುವುದು ಸಹಜ. ಆಗೆಲ್ಲಾ ನಮಗೆ ನಾವೇ ಸಮಾಧಾನಿಸಿಕೊಳ್ಳುತ್ತ, ಬಂದಿರುವ ಉದ್ದೇಶವನ್ನು ಮನದಲಿ ಜಪಿಸುತ್ತಾ, ಮುಂದಿನ ಗುರಿಯತ್ತ ದಾಪುಗಾಲು ಹಾಕುವುದನ್ನು ಅರಿತಿರಬೇಕು. ಊಟದಲ್ಲಿ ಮನೆ ಊಟದ ಸವಿ ಇಲ್ಲದಿದ್ದರೂ, ಹೊಸ ಗೆಳತಿಯರ ವರಸೆಗಳ ಪರಿಚಯವಾದರೂ, ಎಲ್ಲಿಲ್ಲದ ನಿರಾಸೆ ಆವರಿಸಿದರೂ, ಚುಚ್ಚು ಮಾತುಗಳಿಂದ ನೋವಾದರೂ ಸಹಿಸಿಕೊಳ್ಳಬೇಕು ಏಕೆಂದರೆ ಅದು ನಮಗೆ ಅನಿವಾರ್ಯ ನಮ್ಮ ಅಂತಿಮ ಗುರಿ ಸಾಧನೆ ಮಾತ್ರ. ಸಾಧನೆಯ ಮೆಟ್ಟಿಲುಗಳು ಹೂವಿನ ಹಾಸಿಗೆಯಂತಲ್ಲ, ಆದರೆ ಕಾನನದ ಮಧ್ಯೆ ಕಣ್ಣುಗಳನ್ನು ಕಟ್ಟಿದಂತೆಯೂ ಅಲ್ಲ. ಈ ಹಾದಿಯಲ್ಲಿ ಕಲ್ಲು– ಮುಳ್ಳುಗಳು ಸರ್ವೇ ಸಾಮಾನ್ಯ.

ಇಂತಹ ಸಣ್ಣ ಪುಟ್ಟ ಕಲ್ಲು – ಮುಳ್ಳುಗಳನ್ನು ತೆಗೆದು ಹಾಕಿ, ಲೋಪ ದೋಷಗಳನ್ನು ಸರಿಪಡಿಸಿಕೊಳ್ಳುತ್ತಾ, ಊಟ – ನಿದ್ದೆಗಳ ವ್ಯಾಮೋಹದಿಂದ ದೂರ ಸರಿದರೆ ನಿರೀಕ್ಷಿತ ಗುರಿ ತಲುಪಲು ಸಾಧ್ಯ. ಬೀಳುವೆನೆಂಬ ಭಯವನ್ನು ಬಿಟ್ಟರೆ ಹಕ್ಕಿ ಹಾರಲು ಸಾಧ್ಯ. ನನ್ನಿಂದ ಆಗದು ಎಂಬ ಭಾವನೆಯನ್ನು ಬಿಟ್ಟರೆ ಸಾಧನೆ ಸಾಧ್ಯ. ನಮ್ಮ ಹಿಂದೆ ಗುರುಗಳ ಶ್ರಮವಿದೆ, ನಮ್ಮ ಮುಂದೆ ಗುರಿಯಿದೆ, ಇದಕ್ಕೆ ನಮ್ಮ ಪರಿಶ್ರಮವೂ ಸೇರಿದರೆ, ನಾವು ಧೀರರಾಗಿ ನಮ್ಮ ಗೆಲುವಿನ ಮೆಟ್ಟಿಲು ಹತ್ತ ಬಹುದು. ಸಲ್ಲದ ಯೋಚನೆಗಳಿಂದ, ಸೋಲಿನ ಹೆದರಿಕೆಗಳಿಂದ ಹೊರಗೆ ಬಂದು ಸಾಧನೆಯ ಮಾರ್ಗ ಅರಿಯೋಣ. ಸಾಧನೆ ಸಾಧಕನ ಸ್ವತ್ತೆಂಬುದನ್ನು ಸಾಬೀತು ಪಡಿಸೋಣ.

**ಪ್ರಮತ**
ಪ್ರಥಮ ಪಿ.ಯು.ಸಿ. ವಿಜ್ಞಾನ ವಿಭಾಗ

## ಅಪ್ಪನೆಂಬ ಬೆಳಕು

ಪ್ರತಿ ಮಗುವಿನ ಜೀವನದ ನಾಯಕ
ವರ್ಣಿಸಲು ಪದಗಳಿಗೆ ಸಿಗದ ಜನಕ
ಅರಸನಂತೆ ಮೆರೆಸಿದ ಆ ನಿನ್ನ ಹೆಗಲು
ಹೆಜ್ಜೆ ಇಡಲು ಕಲಿಸಿದ ಆ ನಿನ್ನ ಕೈಯ ಬೆರಳು

ನಿನ್ನ ತ್ಯಾಗವು ಒಂದು ಕಡಲು
ತ್ಯಾಗದಲಿ ನೀ ಆ ಕರ್ಣನಿಗಿಂತಲೂ ಮಿಗಿಲು
ಅಗತ್ಯಗಳನ್ನು ಅರಿತು ಎಲ್ಲವನ್ನು ಕೊಡಿಸುವ
ಶ್ರೀಮಂತ
ಬದುಕಿಗೆ ಬಣ್ಣವನ್ನು ಕಲ್ಪಿಸಿಕೊಟ್ಟ ಧೀಮಂತ

ನಿನ್ನ ಹೆಸರಿಂದ ಜಗತ್ತು ನನ್ನನ್ನು ಗುರುತಿಸಲು
ನೀ ಕಲಿಸಿ ಕೊಟ್ಟೆ ಬದುಕಿನಲಿ ಸೋಲದಿರಲು
ತಾರೆಗಳು ಮಿನುಗಲು ಇರುಳು ಮಾತ್ರ ಸೀಮಿತ
ಆದರೆ ನೀ ಮಿನುಗುವೆ ನನ್ನ ಜೀವನ ಪರ್ಯಂತ

ನಿನ್ನ ಪ್ರೀತಿ ತ್ಯಾಗಕ್ಕೆ ನಾ ಕೊಡುವುದು ಏನಂತ
ಸದಾ ನಿಸ್ವಾರ್ಥದ ಒಳಿತನ್ನು ಬಯಸುವ
ಹೃದಯ ಶ್ರೀಮಂತ

ರಚನೆ : **ಚೈತನ್ಯ ವೈ.ಎಂ**
ದ್ವಿತೀಯ ಪಿ.ಯು.ಸಿ, ವಿಜ್ಞಾನ ವಿಭಾಗ

## 91 Students who secured MBBS Seats in the FIRST ROUND allotment of NEET - 2023




**CHINMAY NAYAK**
JGMMMS Dharwad
MBBS - Govt.




**SOURAV VINAYAKSHETTY**
JJMMC Davangere
MBBS - Govt.



**KOMALA H S**
VIMS Bellary
MBBS - Govt.



**RILISHA REECHA TELLIS**
Akash Inst. of Med. Sciecne
Bangalore - MBBS - Govt.



**SAGAR H HAPPAL**
NMC Raichur
MBBS - Govt.



**SRINIDHI V**
SIMSRH Tumkur
MBBS - Govt.



**BAHUBALI BHARAMAPP JARALE**
SMCR Tumakuru
MBBS - Govt.



**ROHINI KORE**
SIMSRC Mangalore
MBBS - Govt.



**SHYAM D SANNAKKI**
CIMS CHAMARAJANAGAR
MBBS - Govt.



**HITESH V**
YMC Mangalore
MBBS - Govt.



**PRAJWAL REDDY S**
VIMSRC Bangalore
MBBS - Pvt.



**ADITHI H PRASAD**
BGS Bangalore
MBBS - Pvt.



**CHANNAKESHAV R M**
JJMMC Davangere
MBBS - Pvt.



**SHREEVARDHAN SHENOY**
JJMMC Davangere
MBBS - Pvt.



**ARYAN ANABERU**
SSIMS Davangere
MBBS - Pvt.



**M R CHINMAYI**
SNMCRC Bagalkot
MBBS - Pvt.



**NINAD N KULAL**
AJIMS Mangalore
MBBS - Pvt.



**AADYA DAYANAND NAIK**
SMC Shimoga
MBBS - Pvt.



**PRERANA PRAKASH BUDNI**
SBMC Chitradurga
MBBS - Pvt.



**PALLAVI ASHOK ANGADI**
SIMSRH Tumkur
MBBS - Pvt.



**PRAJWAL D**
KIMSRC MANGALORE
MBBS - Pvt.



**ISHAAN GANGADHAR UMARANI**
SDM Dharwad
MBBS - Pvt.



**PRANAM ARUN SHETTY**
AJIMS Mangalore
MBBS - Pvt.



**KISHAN V**
VIMSRC, Bangalore
MBBS - Pvt.



**P PRERANA ACHARYA**
SDM Dharwad
MBBS - Pvt.



**VARUN SHETTY**
AJIMS Mangalore
MBBS - Pvt.



**ARYA S GOWDA**
SIMS Bangalore
MBBS - Pvt.



**AATHMIKA SHETTY**
AJIMS Mangalore
MBBS - Pvt.



**ANANYA B POOJARY**
AJIMS Mangalore
MBBS - Pvt.



**JASMITHA K B**
SMC Shimoga
MBBS - Pvt.



**ASHITHA REDDY Y**
NMC Raichur
MBBS - Pvt.



**DISHA G RAO KORDCAL**
SIMRC Mangalore
MBBS - Pvt.



**SUPRASAD C BHAT**
SIMRC Mangalore
MBBS - Pvt.

**SHRAVANYA S S ACHARYA**
SIMRC Mangalore
MBBS - Pvt.

**TEJAL GOWDA N A**
SMC Shimoga
MBBS – Others.

**ARJUN PRASAD KUDLU**
YMC Mangalore
MBBS – Others.

**KARTIK GOTADAKI**
Universal Med. College, Kolkata
MBBS - Pvt.

*ಮೊದಲನೆಯ ಪುಟದಿಂದ ..*

### ಪ್ರತಿಭಾ ಪುರಸ್ಕಾರ



**ತಂದೆ, ತಾಯಿ, ಗುರುವಿನ ಪಾದಚರಣಕೆರಗಿ ಪಡೆದ ಜ್ಞಾನವು ಅಹಂಕಾರವನ್ನು ತರದೆ ಸಮಾಜ, ದೇಶದ ಮೇಲಿನ ಕಳಕಳಿಯಿಂದ ಮಮಕಾರವನ್ನು ತಂದುಕೊಟ್ಟು ರಾಷ್ಟ್ರಭಕ್ತಿ ಮೂಡಿಸುವಂತಾದಾಗ ನಮ್ಮಂತಹ ಶಿಕ್ಷಣ ಸಂಸ್ಥೆಗಳ ಕಾರ್ಯವು ಸಾರ್ಥಕ**
**– ಡಾ.ಸುಧಾಕರ್ ಶೆಟ್ಟಿ**

ಕಾರ್ಯಕ್ರಮದಲ್ಲಿ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ ಸಾಧಕ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಮತ್ತು ಉಡುಪಿ ಜ್ಞಾನಸುಧಾ ಪದವಿ ಪೂರ್ವಕಾಲೇಜು ನಾಗಬನ ಕ್ಯಾಂಪಸ್ ಮತ್ತು ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಕಾಲೇಜಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಸಾಧಕ ವಿದ್ಯಾರ್ಥಿಗಳನ್ನು, ಜ್ಞಾನಸುಧಾ ಸಂಸ್ಥೆಯಲ್ಲಿ ಕಳೆದ 10ವರ್ಷಗಳಿಂದ ಸೇವೆಸಲ್ಲಿಸಿದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗವನ್ನು ಗುರುತಿಸಿ ಗೌರವಿಸಲಾಯಿತು. ಈ ಪ್ರತಿಭಾ ಪುರಸ್ಕಾರದಲ್ಲಿ ಟ್ರಸ್ಟಿನ ವತಿಯಿಂದ 38ಲಕ್ಷ ವಿದ್ಯಾರ್ಥಿ ವೇತನ ವಿತರಿಸಲಾಯಿತು. ತ್ರಿವಿಧ ಜಿಗಿತದಲ್ಲಿ ರಾಜ್ಯಮಟ್ಟದಲ್ಲಿ ದ್ವಿತೀಯ ಸ್ಥಾನ ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಕಾರ್ಕಳ ಜ್ಞಾನಸುಧಾ ಆಂಗ್ಲಮಾದ್ಯಮ ಪ್ರೌಢಶಾಲೆಯ ಪ್ರಣಯ್ ಶೆಟ್ಟಿಯವರನ್ನು ಜೊತೆಗೆ ಎನ್.ಐ.ಟಿ.ಕೆ ಸುರತ್ಕಲ್‌ನಲ್ಲಿ ಪಿ.ಎಚ್.ಡಿ ಪದವಿ ಪೂರೈಸಿದ ರಸಾಯನ ಶಾಸ್ತ್ರ ಉಪನ್ಯಾಸಕರಾದ ಡಾ.ಹರ್ಷರವರನ್ನು ಹಾಗೂ ರಾಜ್ಯಮಟ್ಟದಲ್ಲಿ ಆರ್ಮ್ ರೆಸ್ಲಿಂಗ್‌ನಲ್ಲಿ ಪ್ರಶಸ್ತಿಗಳಿಸಿದ ರಸಾಯನ ಶಾಸ್ತ್ರ ಉಪನ್ಯಾಸಕಿ ಅಕ್ಷತಾ ಜೆ.ಶೆಟ್ಟಿಯರನ್ನು ಸನ್ಮಾನಿಸಲಾಯಿತು.

## ಮೌಲ್ಯಸುಧಾ
### ಸಂಸ್ಕೃತಿ – ಸಂಸ್ಕಾರ – ಸದ್ವಿಚಾರದಡಿ ನಡೆದು ಬರುತ್ತಿರುವ ತಿಂಗಳ ಮೌಲಿಕ ಸರಣಿ ಕಾರ್ಯಕ್ರಮ

### ಪ್ರೇರಣೆ, ಸ್ಫೂರ್ತಿ ಮತ್ತು ಯಶೋಗಾಥೆಗಳು




ಅಂತರಂಗದಿಂದ ಮೂಡುವುದೇ ಬಹಿರಂಗದಿಂದ ಬರುವುದೇ ಪ್ರೇರಣೆ. ಅಂತರಂಗದ ಧ್ವನಿಗೆ ಯಾವಾಗ ಕಿವಿಗೊಡುತ್ತೇವೊ ಅಂದು ಸಾಧಕರಾಗುತ್ತೇವೆ. ಯಾರು ಅಪ್ಪ–ಅಮ್ಮನನ್ನು ಪ್ರೀತಿಸುತ್ತಾರೋ, ಲೆಜೆಂಡಾಗಿ ತಗೊಳ್ಳುತ್ತಾರೋ ಅವರು ಯಶಸ್ವಿಯಾಗುತ್ತಾರೆ.

**ಶ್ರೀ ರಾಜೇಂದ್ರ ಭಟ್ ಕೆ.**
ಜೆ.ಸಿ.ಐ. ರಾಷ್ಟ್ರೀಯ ತರಬೇತುದಾರರು




### ಸೇನೆಯಲ್ಲಿ ರಾಷ್ಟ್ರೀಯ ಭಾವೈಕ್ಯತೆ

ರಾಷ್ಟ್ರರಥವನ್ನು ಮುಂದೆ ತರಬೇಕಾದರೆ ಎಲ್ಲರೂ ಒಂದಾಗಿ ಆಲೋಚನೆ ಮಾಡಬೇಕು. ದೇಶ ಪ್ರಗತಿಯಾದರೆ ನಮ್ಮ ಪ್ರಗತಿಯಾದಂತೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಯಾವುದೇ ಜಾತಿ, ಮತ, ಧರ್ಮದ ಹಂಗಿಲ್ಲದೆ ಇರುವ ಸೇವಾ ಕ್ಷೇತ್ರವಿದ್ದರೆ ಅದು ಸೇನೆ ಮಾತ್ರ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**
ಮಾಜಿ ಸದಸ್ಯರು, ಕರ್ನಾಟಕ ವಿಧಾನ ಪರಿಷತ್



**STHUTHI NAYAK -**I PCMB (KJS)



**SANVI L**, I PCMB (KJS)

## ಯೋಗಾಭಿನಂದನೆಗಳು



**ಕು.ಅರ್ಚನಾ**
ಗಣಕ ವಿಜ್ಞಾನ ವಿಭಾಗದ ಸಹಾಯಕಿ, ಕಾರ್ಕಳ ಜ್ಞಾನಸುಧಾ

ಜ್ಞಾನಸುಧಾ ಪರಿವಾರದ ಹೆಮ್ಮೆಯ ಅಂತರಾಷ್ಟ್ರೀಯ ಯೋಗ ಪಟುವಾದ ತಾವು ಕಾಂಬೋಡಿಯಾದಲ್ಲಿ ನಡೆದ ಇಂಟರ್ನ್ಯಾಶನಲ್ ಯೋಗಾಸನ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ 20–30ರ ವಯೋಮಿತಿಯ ಮಹಿಳಾ ವಿಭಾಗದಲ್ಲಿ ಪ್ರಥಮ ಸ್ಥಾನಿಯಾಗಿ ಹೊರಹೊಮ್ಮಿದ ತಮಗೆ

**ಸುಧಾಭಿನಂದನೆಗಳು**

**ಜ್ಞಾನಸುಧಾ ಪರಿವಾರ**

## ಜೀವನ ಸತ್ಯ

ಕಾಣಿಸದೋ ನಿನಗೆ ಮುಂದಿನ ದಾರಿ ?
ತುಂಬ ಕಷ್ಟವೆನಿಸುವುದೇ ನಿನ್ನಯ ದಾರಿ ?
ಏಕೆ ಕೇಳುವೆ ಸಲಹೆಯನ್ನು ಬೇರೊಬ್ಬರ ಬಳಿ ?
ನೀ ಗಮನಿಸು ನಿನ್ನ ಕಷ್ಟದ ಸುಳಿ ।

ಸತ್ಯಕ್ಕೆ ಕಲ್ಲು–ಮುಳ್ಳು ಸಿಕ್ಕೇ ಸಿಗುವುದು,
ಮೇಲಿಂದ ಮೇಲೆ ಸೋಲು ಬಂದೇ ಬರುವುದು,
ಹಿಂಜರಿದು ಕೂರುವುದಾದರೆ ಈ ಜೀವನ ಏತಕೆ ?
ಬಂದಂತಹ ಕಷ್ಟ ದಾಟಿ ಏರು ನೀ ಎತ್ತರಕ್ಕೆ ।
ನಕ್ಕರೆ ಅಳಿಸುವವರಿದ್ದಾರೆ, ಅತ್ತರೆ ನಗಿಸುವವರಿದ್ದಾರೆ
ಆ ಆಯ್ಕೆಯನ್ನು ದೇವರು ನಿನಗೆ ಬಿಟ್ಟಿದ್ದಾರೆ
ನಿನ್ನ ಬದುಕನ್ನು ಬದುಕು ಎಲ್ಲರೂ ಮೆಚ್ಚುವಂತೆ
ಪ್ರಾಣ ಪಕ್ಷಿ ಹಾರಿ ಹೋದರೆ ಊರೆಲ್ಲಾ ಅಳುವಂತೆ.

ರಚನೆ : **ಶೋಧನ್ ಆರ್. ಹೆಗ್ಡೆ**
10ನೇ ತರಗತಿ 'ಎ' ವಿಭಾಗ

**ಉಡುಪಿ ಜ್ಞಾನಸುಧಾ** | **ಕಾರ್ಕಳ ಜ್ಞಾನಸುಧಾ**

## ಅಜೆಕಾರ್ ಪದ್ಮ ಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವತಿಯಿಂದ ನಡೆದ ಅರ್ಹತಾ ಪರೀಕ್ಷೆ ಹಾಗೂ ವಿದ್ಯಾರ್ಥಿ ವೇತನ

### 14.85 ಲಕ್ಷರೂ. ವಿದ್ಯಾರ್ಥಿ ವೇತನ ವಿತರಣೆ

ಉಡುಪಿ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ.ಗೆ ದಾಖಲಾದ ವಿದ್ಯಾರ್ಥಿಗಳಿಗೆ ನಡೆದ ವಿದ್ಯಾರ್ಥಿ ವೇತನ ಅರ್ಹತಾ ಪರೀಕ್ಷೆಯಲ್ಲಿ ಒಟ್ಟು ದಾಖಲಾತಿಯ ಶೇ.10ರಷ್ಟು ವಿದ್ಯಾರ್ಥಿಗಳಿಗೆ ಜೂ.10ರಂದು ನಡೆದ 2023–24ನೇ ಸಾಲಿನ ಪ್ರಥಮ ಪಿ.ಯು.ಸಿ. ಓರಿಯೆಂಟೇಶನ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ವೇತನವನ್ನು ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವತಿಯಿಂದ ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಸಿ.ಇ.ಒ. ದಿನೇಶ್ ಎಂ ಕೊಡವೂರು, ಉಡುಪಿ ಜ್ಞಾನಸುಧಾ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲರಾದ ಗಣೇಶ್ ಶೆಟ್ಟಿ, ಡೀನ್ ಅಕಾಡೆಮಿಕ್ಸ್ ಡಾ.ಮಿಥುನ್ ಯು, ಉಪಪ್ರಾಂಶುಪಾಲರಾದ ಸಂತೋಷ್ ಉಪಸ್ಥಿತರಿದ್ದರು.

### ಜಿಲ್ಲಾ ಜೀವಶಾಸ್ತ್ರ ಉಪನ್ಯಾಸಕರಿಗೆ ಕಾರ್ಯಾಗಾರ




ಕಾರ್ಯಾಗಾರವನ್ನು ಪದವಿಪೂರ್ವ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕ ಶ್ರೀ ಮಾರುತಿಯವರು ಉದ್ಘಾಟಿಸಿದರು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿವಿಧ ಸವಾಲುಗಳ ನಡುವೆ ಉಪನ್ಯಾಸಕರು ಉತ್ತಮ ಮೌಲ್ಯ ರೂಢಿಸಿ ಮಕ್ಕಳಿಗೆ ಸದೃಢ ಭವಿಷ್ಯ ಕಲ್ಪಿಸಬೇಕು. ಜೀವಶಾಸ್ತ್ರದಲ್ಲಿ ಮಹತ್ತರ ಪಾತ್ರ ವಹಿಸುವ ಪ್ರಯೋಗಾಲಯದ ಸದ್ಬಳಕೆಯಾಗಬೇಕು. ಸಂಶೋಧನೆ ಜೀವನದ ಅಂಗವಾಗಬೇಕು ಎಂದು ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿ ಹೇಳಿದರು. ಉಡುಪಿ ಜಿಲ್ಲಾ ಜೀವಶಾಸ್ತ್ರ ಉಪನ್ಯಾಸಕರ ಸಂಘ ಹಾಗೂ ಉಡುಪಿ ಜ್ಞಾನಸುಧಾ ಪ.ಪೂ. ಕಾಲೇಜು ಇವರ ಜಂಟಿ ಆಶ್ರಯದಲ್ಲಿ ಉಡುಪಿ ಜಿಲ್ಲೆಯ ಪ.ಪೂ. ಕಾಲೇಜುಗಳ ಜೀವಶಾಸ್ತ್ರ ಉಪನ್ಯಾಸಕರಿಗೆ ಒಂದು ದಿನದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪದವಿಪೂರ್ವ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕ ಮಾರುತಿ ಕಾರ್ಯಾಗಾರ ಉದ್ಘಾಟಿಸಿ ವಿದ್ಯಾರ್ಥಿ ವಿವಿಧ ಪರೀಕ್ಷೆಗಳನ್ನು ಧೈರ್ಯದಿಂದ ಎದುರಿಸುವಲ್ಲಿ ಉಪನ್ಯಾಸಕರ ಪಾತ್ರ ಮಹತ್ವದ್ದು ಎಂದು ಹೇಳಿದರು. ಉಡುಪಿ ಜ್ಞಾನಸುಧಾ ಪ.ಪೂ.ಕಾಲೇಜಿನ ಪ್ರಾಂಶುಪಾಲರಾದ ಗಣೇಶ್ ಶೆಟ್ಟಿ, ಕಾರ್ಕಳ ಜ್ಞಾನಸುಧಾ ಪ.ಪೂ. ಕಾಲೇಜು ಗಣಿತನಗರ ಕ್ಯಾಂಪಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಪ್ರಾಂಶುಪಾಲರಾದ ದಿನೇಶ್ ಎಂ ಕೊಡವೂರು, ಉಡುಪಿ ಜಿಲ್ಲಾ ಪದವಿಪೂರ್ವ ವಿಭಾಗ ಜೀವಶಾಸ್ತ್ರ ಉಪನ್ಯಾಸಕರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಭಟ್ ಸಂಘದ ಕಾರ್ಯದರ್ಶಿ ಡಾ.ವಿಶಾಲಾಕ್ಷಿ ಮೊದಲಾದವರು ಉಪಸ್ಥಿತರಿದ್ದರು

### ಸ್ವಾತಂತ್ರ್ಯ ಸಂಭ್ರಮ

**ಉಡುಪಿ ಜ್ಞಾನಸುಧಾ :** ಉಡುಪಿ ಜ್ಞಾನಸುಧಾ ಪದವಿ ಪೂರ್ವಕಾಲೇಜಿನಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಮಣಿಪಾಲ ಇಲ್ಲಿನ ಅಸೋಸಿಯೇಟ್ ಫ್ರೊಫೆಸರ್ ಆಗಿರುವ ಡಾ.ಶ್ರುತಿ ಆಚಾರ್ಯ ಇವರು ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು. ಪ್ರಾಂಶುಪಾಲರಾದ ಶ್ರೀ ಗಣೇಶ್, ಉಪಪ್ರಾಂಶುಪಾಲರಾದ ಶ್ರೀ ಸಂತೋಷ್, ಉಪನ್ಯಾಸಕರು, ಉಪನ್ಯಾಸಕೇತರ ವರ್ಗದವರು ಉಪಸ್ಥಿತರಿದ್ದರು.

### 36.5 ಲಕ್ಷ ರೂ ವಿದ್ಯಾರ್ಥಿ ವೇತನ ವಿತರಣೆ




ಕಾರ್ಯಕ್ರಮದಲ್ಲಿ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿಯವರು ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿ ವೇತನ ನೀಡಿ ಶುಭ ಹಾರೈಸಿದರು.

ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿಗೆ ದಾಖಲಾದ ವಿದ್ಯಾರ್ಥಿಗಳಿಗೆ ನಡೆದ ವಿದ್ಯಾರ್ಥಿವೇತನ ಅರ್ಹತಾ ಪರೀಕ್ಷೆಯಲ್ಲಿ ಒಟ್ಟು ದಾಖಲಾತಿಯ ಶೇ10ರಷ್ಟು ವಿದ್ಯಾರ್ಥಿಗಳಿಗೆ 2023–24ನೇ ಸಾಲಿನ ಪ್ರಥಮ ಪಿಯುಸಿ ಓರಿಯಂಟೇಶನ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ವೇತನ ನೀಡಲಾಯಿತು. ಕಾರ್ಕಳ ಜ್ಞಾನಸುಧಾ ಪಿಯು ಕಾಲೇಜಿಗೆ ದಾಖಲಾದ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಹಾಗೂ ಸ್ಥಳೀಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಅರ್ಹತಾ ಪರೀಕ್ಷೆಯನ್ನು ನಡೆಸಿ ವಿದ್ಯಾರ್ಥಿ ವೇತನಕ್ಕೆ ಆಯ್ಕೆ ಮಾಡಲಾಗಿತ್ತು. ಇದೇ ಸಂದರ್ಭದಲ್ಲಿ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಓದಿ ಎಸ್.ಎಸ್.ಎಲ್.ಸಿ.ಯಲ್ಲಿ ಅತ್ಯಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಹಾಗೂ ಕಾರ್ಕಳ ತಾಲೂಕಿನ ವಿವಿಧ ಪ್ರೌಢಶಾಲೆಗಳ ಎಸ್.ಎಸ್.ಎಲ್.ಸಿ.ಯಲ್ಲಿ ಮೊದಲ ಸ್ಥಾನವನ್ನು ಪಡೆದು ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿಗೆ ದಾಖಲಾದ ವಿದ್ಯಾರ್ಥಿಗಳಿಗೂ ಕೂಡಾ ವಿದ್ಯಾರ್ಥಿ ವೇತನವನ್ನು ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವತಿಯಿಂದ ನೀಡಲಾಯಿತು. ಈ ಮೂಲಕ ಟ್ರಸ್ಟ್‌ನ ವತಿಯಿಂದ 36.5 ಲಕ್ಷ ರೂ ವಿದ್ಯಾರ್ಥಿ ವೇತನ ವಿತರಿಸಲಾಯಿತು.

### ಎನ್.ಎಸ್.ಎಸ್. ಕಾರ್ಯ ಚಟುವಟಿಕೆಗಳ ಉದ್ಘಾಟನೆ




ಕಾಲೇಜಿನ ಹಳೆ ವಿದ್ಯಾರ್ಥಿಗಳಾದ ಸಿಎ ರಘುರಾಮ್ ಪ್ರಭು, ಸಿಎ ಪವನ್ ಎನ್.ಎಸ್.ಎಸ್. ಕಾರ್ಯಚಟುವಟಿಕೆಗೆ ಚಾಲನೆ ನೀಡಿದರು.

ಪಠ್ಯ ಶಿಕ್ಷಣದ ಜೊತೆಜೊತೆಗೆ ಎನ್.ಎಸ್.ಎಸ್.ನ ಪಠ್ಯೇತರ ಚಟುವಟಿಕೆಗಳು ನಮ್ಮ ಶೈಕ್ಷಣಿಕ ಜೀವನದಲ್ಲಿ ಜೀವನ ಕೌಶಲ್ಯಗಳನ್ನು ಕಲಿಸಿಕೊಡುತ್ತದೆ ಎಂದು ಜ್ಞಾನಸುಧಾ ವಾಣಿಜ್ಯ ವಿಭಾಗದ ಹಳೆ ವಿದ್ಯಾರ್ಥಿಗಳಾದ ಸಿ.ಎ. ರಘುರಾಮ್ ಪ್ರಭು ಸಿ.ಎ. ಪವನ್ ಅಭಿಪ್ರಾಯ ಪಟ್ಟಿದ್ದಾರೆ.

ಕಾರ್ಕಳ ಜ್ಞಾನಸುಧಾ ಪಿಯು ಕಾಲೇಜಿನ ಎನ್.ಎಸ್.ಎಸ್. ಕಾರ್ಯಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಎನ್.ಎಸ್.ಎಸ್.ನ ವಿವಿಧ ಚಟುವಟಿಕೆಗಳು ಶೈಕ್ಷಣಿಕ ಜೀವನದ ನಂತರ ನಮ್ಮ ವೃತ್ತಿ ಜೀವನಕ್ಕೆ, ಸಾಮಾಜಿಕ ಬದುಕಿಗೆ ಸಹಕಾರಿಯಾಗತ್ತದೆ, ವಾಣಿಜ್ಯ ವಿಭಾಗದ ಸ್ಪರ್ಧಾತ್ಮಕ ಪ್ರಪಂಚಕ್ಕೆ ನಾವು ಕೌಶಲ್ಯಭರಿತರಾಗಿ ತೆರೆದುಕೊಳ್ಳಬೇಕಾಗಿದೆ ಎಂದು ಸಿಎ ರಘುರಾಮ್ ಪ್ರಭು ಅಭಿಪ್ರಾಯ ಪಟ್ಟರು. ಸಿಎ ಪವನ್ ಮಾತನಾಡಿ ಜೀವನದಲ್ಲಿ ಯಾವುದೂ ಸುಲಭದಲ್ಲಿ ಸಿಗುವುದಿಲ್ಲ, ಒಂದಷ್ಟು ಸಮಯದ ಸಂಘಟಿತ ಪ್ರಯತ್ನದ ಪ್ರತಿಫಲವೇ ಯಶಸ್ಸು, ಅಂತಹ ಯಶಸ್ಸಿನ ಹಾದಿಗೆ ಶೈಕ್ಷಣಿಕ ಜೀವನವನ್ನು ಸರಿಯಾಗಿ ಬಳಸಿಕೊಳ್ಳಬೇಕೆಂದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕಾಂತಾವರ ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷರು ಹಾಗೂ ಪ್ರಗತಿಪರ ಕೃಷಿಕ ಶ್ರೀ ಜಯ ಕೋಟ್ಯಾನ್ ಎನ್.ಎಸ್.ಎಸ್. ಸ್ವಯಂಸೇವಕರಿಗೆ ಶುಭಹಾರೈಸಿದರು.

ಇದೇ ಸಂದರ್ಭದಲ್ಲಿ ಕಾಲೇಜಿನ ಹಳೆವಿದ್ಯಾರ್ಥಿಗಳೂ ಆಗಿರುವ ಸಿಎ ರಘುರಾಮ್ ಪ್ರಭು, ಸಿಎ ಪವನ್ ಅವರನ್ನು ಸನ್ಮಾನಿಸಲಾಯಿತು. ಕಳೆದ ವರ್ಷದ ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಸಿಇಒ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ. ಕೊಡವೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪ ಪ್ರಾಂಶುಪಾಲ ಹಾಗೂ ವಾಣಿಜ್ಯ ವಿಭಾಗ ಮುಖ್ಯಸ್ಥರಾದ ಶ್ರೀ ಸಾಹಿತ್ಯ ಉಪಸ್ಥಿತರಿದ್ದರು. ಕನ್ನಡ ಉಪನ್ಯಾಸಕ ಸಂತೋಷ್ ನೆಲ್ಲಿಕಾರು ಕಾರ್ಯಕ್ರಮ ನಿರ್ವಹಿಸಿ, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ರವಿ ಜಿ. ಸ್ವಾಗತಿಸಿ, ವಿದ್ಯಾರ್ಥಿ ಪ್ರತಿನಿಧಿ ಧೀರಜ್ ಪ್ರತಿಜ್ಞಾವಿಧಿ ಬೋಧಿಸಿ, ಸಮಿಯಾ ಹೆಗ್ಡೆ ವಂದಿಸಿದರು.





**ಕಾರ್ಕಳ ಜ್ಞಾನಸುಧಾ :** ಕಾರ್ಕಳ ಜ್ಞಾನಸುಧಾದ ಆವರಣದಲ್ಲಿ ನಡೆದ 77ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಾಜಿ ಸೈನಿಕ ಶ್ರೀ ಲಕ್ಮೀಶ್ ಎಚ್,ಜಿ ಧ್ವಜರೋಹಣಗೈದರು. ಈ ಸಂದರ್ಭ ಅಜೆಕಾರು ಪದ್ಮಗೋಪಾಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಡಾ. ಸುಧಾಕರ ಶೆಟಿ, ಟ್ರಸ್ಟಿ ಶ್ರೀಮತಿ ವಿದ್ಯಾವತಿ ಸುಧಾಕರ್ ಶೆಟ್ಟಿ, ಜ್ಞಾನಸುಧಾ ಸಂಸ್ಥೆಗಳ ಸಿ.ಇ.ಓ ಹಾಗೂ ಕಾರ್ಕಳ ಜ್ಞಾನಸುಧಾ ಪ.ಪೂ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ. ಕೊಡವೂರು, ಉಪಪ್ರಾಂಶುಪಾಲರಾದ ಶ್ರೀ ಸಾಹಿತ್ಯ, ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಉಷಾ ರಾವ್ ಯು., ಉಪ ಪ್ರಾಂಶುಪಾಲರಾದ ಶ್ರೀಮತಿವಾಣಿ. ಕೆ ಉಪಸ್ಥಿತರಿದ್ದರು.

### ಸಿ.ಎ ಫೌಂಡೇಶನ್ ಫಲಿತಾಂಶ : ಜ್ಞಾನಸುಧಾದ ಅತ್ಯುತ್ತಮ ಸಾಧನೆ


ಸಂಕೇತ್.ವಿ.ಕಾಮತ್


ಶರಣ್ಯ ಎಸ್. ಹೆಗ್ಡೆ


ಬ್ರಾಯನ್ ವಿಕ್ಕಿ ಡಿ'ಸೋಜ


ಬಿ.ಅನೂಪ್ ಕಾಮತ್


ರಾಯನ್ ಮೆಂಡೋನ್ಸಾ

ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಎಕೌಂಟೆಂಟ್ಸ್ ಆಫ್ ಇಂಡಿಯಾ ರಾಷ್ಟ್ರಮಟ್ಟದಲ್ಲಿ ನಡೆಸುವ ಸಿಎ ಫೌಂಡೇಶನ್ ಪರೀಕ್ಷೆಯಲ್ಲಿ ಕಾರ್ಕಳ ಜ್ಞಾನಸುಧಾದ ವಾಣಿಜ್ಯ ವಿಭಾಗದ 5 ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳೊಂದಿಗೆ ತೇರ್ಗಡೆ ಹೊಂದುವ ಮೂಲಕ ಮುಂದಿನ ಸಿಎ ಇಂಟರ್ ಮಿಡಿಯೆಟ್ ಹಂತಕ್ಕೆ ಅರ್ಹತೆ ಹೊಂದಿದ್ದಾರೆ. ವಿದ್ಯಾರ್ಥಿಗಳಾದ ಸಂಕೇತ್.ವಿ.ಕಾಮತ್ (271), ಶರಣ್ಯ ಎಸ್. ಹೆಗ್ಡೆ (258), ಬ್ರಾಯನ್ ವಿಕ್ಕಿ ಡಿ'ಸೋಜ (245), ಬಿ.ಅನೂಪ್ ಕಾಮತ್(232), ರಾಯನ್ ಮೆಂಡೋನ್ಸಾ (200) ಇವರು ಅಂಕ ಗಳಿಸಿರುತ್ತಾರೆ. ಕಳೆದ ಬಾರಿಯೂ 6 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು ಸಾತ್ವಿಕ್ ಪ್ರಭು 342 ಅಂಕಗಳಿಸಿರುವುದನ್ನು ಸ್ಮರಿಸಿಕೊಳ್ಳಬಹುದು. ಸಾಧಕ ವಿದ್ಯಾರ್ಥಿಗಳನ್ನು ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷರಾದ ಡಾ.ಸುಧಾಕರ್ ಶೆಟ್ಟಿಯವರು ಅಭಿನಂದಿಸಿದ್ದಾರೆ.

## ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ

### ತಾಲೂಕು ಮಟ್ಟದ ಕರಾಟೆ ಪಂದ್ಯಾಟದ ಸಾರಥ್ಯ

**ಉದ್ಘಾಟನೆ**




ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಡುಪಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಕಾರ್ಕಳ ಹಾಗೂ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಶಾಲೆ ಮತ್ತು ಪ್ರೌಢಶಾಲೆ ಇವರ ಸಹಯೋಗದಲ್ಲಿ ನಡೆದ ಕಾರ್ಕಳ ತಾಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗದ ಬಾಲಕ ಬಾಲಕಿಯರ ಕರಾಟೆ ಪಂದ್ಯಾಟವನ್ನು ಕುಕ್ಕುಂದೂರು ಗ್ರಾಮ ಪಂಚಾಯತ್ ಅಧ್ಯಕ್ಷರಾಗಿರುವ ಶ್ರೀಮತಿ ಶಶಿಮಣಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಚಂದ್ರಯ್ಯ, ದೈಹಿಕ ಪರಿವೀಕ್ಷಣಾಧಿಕಾರಿ ರವಿಚಂದ್ರ ಕಾರಂತ್, ಪ್ರೌಢಶಾಲಾ ವಿಭಾಗದ ದೈ.ಶಿ.ಸಂಘದ ಅಧ್ಯಕ್ಷರಾದ ಸಂತೋಷ್ ಕುಮಾರ್ ಶೆಟ್ಟಿ, ಸಿ.ಇ.ಒ., ದಿನೇಶ್ ಎಂ. ಕೊಡವೂರು, ಪ್ರಾಂಶುಪಾಲೆ ಉಷಾ ರಾವ್ ಯು. ಉಪಸ್ಥಿತರಿದ್ದರು.

**ಸಮಾರೋಪ**



ಈ ಪಂದ್ಯಾಟದಲ್ಲಿ ಶಾಲೆಯ ವಿದ್ಯಾರ್ಥಿಗಳಾದ 8ನೇ ತರಗತಿಯ ಸಂಚಿತ್ ಜಿ ಶೆಟ್ಟಿ, ಹಿಮಾನಿ ಶೆಟ್ಟಿ, ಕಾರ್ತಿಕ್, ದೈವಿಕ್, 10ನೇ ತರಗತಿಯ ಪ್ರಣಯ್ ಪಿ. ಶೆಟ್ಟಿ ಹಾಗೂ 6ನೇ ತರಗತಿಯ ಶ್ರೀಫಲ್ ಶೆಟ್ಟಿ ಜಿಲ್ಲಾ ಮಟ್ಟಕ್ಕೆ ಆಯ್ಕೆಗೊಂಡರು.

ಉಡುಪಿ ಜಿಲ್ಲಾಕರಾಟೆ ಶಿಕ್ಷಕರ ಸಂಘದ ಅಧ್ಯಕ್ಷರಾಗಿರುವ ಕಿರಣ್ ಕುಂದಾಪುರ, ಪ್ರಧಾನ ಕಾರ್ಯದರ್ಶಿ ಲೋಹಿತಾಶ್ವ, ರಾಜ್ಯ ಕರಾಟೆ ಶಿಕ್ಷಕರ ಸಂಘದ ಕೋಶಾಧಿಕಾರಿ ರವಿ ಸಾಲಿಯಾನ್, ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಉಪ ಪ್ರಾಂಶುಪಾಲರಾದ ಶ್ರೀಮತಿ ವಾಣಿ.ಕೆ ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಅರುಣ್‌ಕುಮಾರ್ ವಿಜೇತರ ಪಟ್ಟಿಯನ್ನು ವಾಚಿಸಿ, ವಿಜೇತರಿಗೆ ಪ್ರಶಸ್ತಿ ಪತ್ರ ಮತ್ತು ಪದಕಗಳನ್ನು ನೀಡಿಗೌರವಿಸಲಾಯಿತು. ತೀರ್ಪುಗಾರರಿಗೆ ಸ್ಮರಣಿಕೆ ನೀಡಿ ಗೌರವಿಸಿದರು. ಸಾಧಕ ವಿದ್ಯಾರ್ಥಿಗಳಿಗೆ ಜ್ಞಾನಸುಧಾ ಸಂಸ್ಥೆಯ ಅಧ್ಯಕ್ಷರಾದ ಡಾ.ಸುಧಾಕರ್ ಶೆಟ್ಟಿ ಅಭಿನಂದಿಸಿದರು.

## ಯೋಗಾಸನ ಸ್ಪರ್ಧೆ – ವಿಭಾಗೀಯ ಮಟ್ಟಕ್ಕೆ ಆಯ್ಕೆ

ಸ.ಪ.ಪೂ ಕಾಲೇಜು (ಪ್ರೌಢಶಾಲಾ ವಿಭಾಗ) ಮಲ್ಪೆಯಲ್ಲಿ ನಡೆದ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ 14ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ 8ನೇ ತರಗತಿಯ ಕು.ಅನ್ವಿ ಎಚ್. ಅಂಚನ್ ಪ್ರಥಮ ಸ್ಥಾನ ಪಡೆದು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ ಹಾಗೂ 17ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ 9ನೇ ತರಗತಿಯ ಕು. ಅಶ್ನಿ ಕೋಟ್ಯಾನ್ ದ್ವಿತೀಯ ಸ್ಥಾನ ಪಡೆದಿದ್ದಾರೆ.


ಅನ್ವಿ ಎಚ್. ಅಂಚನ್


ಅಶ್ನಿ ಕೋಟ್ಯಾನ್

## ಸ್ಪೆಲ್ ಬೀ : ರಾಷ್ಟ್ರಮಟ್ಟಕ್ಕೆ ಆಯ್ಕೆ.


ಸುಮುಖ್‌ರಾಜ್


ಸಾಚಿ


ಭಗತ್ ಶೆಟ್ಟಿ


ಲಿಖಿತ್ ಡಿ. ಶೆಟ್ಟಿ


ಸಾನ್ವಿ


ಗೌರವ್ ಮಹೇಶ್ ಹೆಗ್ಡೆ

ವಿಜ್ ನ್ಯಾಷನಲ್ ಅವರು ನಡೆಸಿರುವಂತಹ ಸ್ಪೆಲ್ ಬೀಸ್ಪರ್ಧೆಯಲ್ಲಿ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಶಾಲೆ ಮತ್ತು ಪ್ರೌಢ ಶಾಲೆಯ ವಿದ್ಯಾರ್ಥಿಗಳಾದ ಸುಮುಖ್‌ರಾಜ್ 10ನೇ ತರಗತಿ, ಸಾಚಿ, ಭಗತ್ ಶೆಟ್ಟಿ, ಲಿಖಿತ್ ಡಿ.ಶೆಟ್ಟಿ 9ನೇ ತರಗತಿ ಹಾಗೂ ಸಾನ್ವಿ ಮತ್ತು ಗೌರವ್ ಮಹೇಶ್ ಹೆಗ್ಡೆ 6ನೇ ತರಗತಿಯ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

## ಕರಾಟೆ : ದ್ವಿತೀಯ ಸ್ಥಾನ



ಬೊಲ್ಯೊಟ್ಟು, ಶ್ರೀ ಗುರುಕೃಪ ಶಾಲೆಯಲ್ಲಿ ನಡೆದ ಜಿಲ್ಲಾಮಟ್ಟದ ಕರಾಟೆ ಸ್ಪರ್ಧೆಯಲ್ಲಿ 17ರ ವಯೋಮಾನದ ಬಾಲಕರ 78 ಕೆ.ಜಿ ಕೆಳಗಿನ ತೂಕದ ವಿಭಾಗದಲ್ಲಿ ಶಾಲೆಯ 10ನೇ ತರಗತಿಯ ಪ್ರಣಯ್ ಪಿ. ಶೆಟ್ಟಿ ಸ್ಪರ್ಧಿಸಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

## ಬೀಜದುಂಡೆ ಅಭಿಯಾನ




ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗದ ವತಿಯಿಂದ ಕಾರ್ಕಳ ಪೇಟೆಯಲ್ಲಿ ಬೀಜದುಂಡೆ ಅಭಿಯಾನವು ಜರುಗಿತು. ವಿದ್ಯಾರ್ಥಿಗಳು ತಯಾರಿಸಿದ ಹಲಸು, ಗೇರು, ಮಾವು, ಹೆಬ್ಬಲಸು ಮುಂತಾದ ಬೀಜದುಂಡೆಗಳನ್ನ ಸುತ್ತ ಮುತ್ತಲಿರುವ ಜನರಿಗೆ ಹಂಚಿ ಪರಿಸರ ಜಾಗೃತಿಗೆ ಕೈಜೋಡಿಸಲು ಕರೆ ನೀಡಿದರು. ಈ ಸಂದರ್ಭ ಹಿರಿಯ ನ್ಯಾಯವಾದಿ ಹಾಗೂ ಕಾರ್ಕಳ ಆಟೋರಿಕ್ಷಾ ಚಾಲಕ ಮಾಲಕರ ಸಂಘದ ಅಧ್ಯಕ್ಷರಾದ ಶ್ರೀ ಬಾಲಕೃಷ್ಣ ಶೆಟ್ಟಿ, ಕಾರ್ಯದರ್ಶಿ ಶ್ರೀ ಅಣ್ಣಿ ಮಡಿವಾಳ, ಗೈಡ್ ಶಿಕ್ಷಕಿಯಾದ ಶ್ರೀಮತಿ ಗಾಯತ್ರಿ, ದೈಹಿಕ ಶಿಕ್ಷಕರಾದ ಶ್ರೀ ಕಿರಣ್‌ಕುಮಾರ್, ಕಲಾ ಶಿಕ್ಷಕರಾದ ಶ್ರೀ ಮನೋಜ್ ಕೆ. ಉಪಸ್ಥಿತರಿದ್ದರು.

## ಚದುರಂಗ : ರಾಜ್ಯಮಟ್ಟಕ್ಕೆ ಆಯ್ಕೆ



ಸ.ಪ.ಪೂ.ಕಾಲೇಜು ಕಂಬದ ಕೋಣೆ ಬೈಂದೂರು ಇಲ್ಲಿ ನಡೆದ ಉಡುಪಿ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ 17ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ 10ನೇ ತರಗತಿಯ ವಿದ್ಯಾರ್ಥಿನಿ ದಿಶಾ ಯು. ಎ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆ ಗೊಂಡಿರುತ್ತಾರೆ ಹಾಗೂ ಕಲಬುರ್ಗಿಯಲ್ಲಿ ನಡೆದ 15ರ ವಯೋಮಾನದ ಮುಕ್ತ ಮತ್ತು ಬಾಲಕಿಯರ ಫೈಡ್ ರೇಟೆಡ್ ಚಾಂಪಿಯನ್ ಶಿಪ್–2023ರ ಚೆಸ್ ಪಂದ್ಯಾಟದಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿ ದ್ವಿತೀಯ ಸ್ಥಾನಿಯಾಗಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುವುದನ್ನು ಈ ಸಂದರ್ಭ ಸ್ಮರಿಸಿಕೊಂಡು ಅಭಿನಂದಿಸುತ್ತಿದ್ದೇವೆ.

## ಜಿಲ್ಲಾ ಮಟ್ಟಕ್ಕೆ ಆಯ್ಕೆ



ಬೈಲೂರು ಸರಕಾರಿ ಪದವಿ ಪೂರ್ವಕಾಲೇಜಿನಲ್ಲಿ ನಡೆದ ತಾಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢವಿಭಾಗದ ಚೆಸ್ ಪಂದ್ಯಾಟದಲ್ಲಿ ಶಾಲೆಯ ವಿದ್ಯಾರ್ಥಿಗಳಾದ 7ನೇ ತರಗತಿಯ ಮನ್ವಿತ್ ಮತ್ತು ಜೇಷ್ಠ ನಾಯಕ್, 9ನೇ ತರಗತಿಯ ಶೋಧನ್ ವರ್ಮ ಮತ್ತು ಮಿಶಲ್ ಅಸಾದಿ, 10ನೇ ತರಗತಿಯ ದಿಶಾ.ಯು ಜಿಲ್ಲಾ ಮಟ್ಟಕ್ಕೆ ಆಯ್ಕೆಗೊಂಡಿರುತ್ತಾರೆ.

## ವಿಶ್ವಯೋಗ ದಿನಾಚರಣೆ



ಶಾಲೆಯಲ್ಲಿ ವಿಶ್ವಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ನ್ಯಾಚುರೋಪತಿ ಯೋಗ ವೈದ್ಯೆ ಹಾಗೂ ರಾಷ್ಟ್ರಮಟ್ಟದ ಯೋಗ ಪಟುವಾಗಿರುವ ಡಾ. ಚೈತ್ರ ಶೆಟ್ಟಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ವೇಳೆ ಮಾತಾನಾಡಿದ ಅವರು ವಿದ್ಯಾರ್ಥಿಗಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯಲ್ಲಿ ಯೋಗದ ಪಾತ್ರ ಮಹತ್ವದ್ದು ಎಂದು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ನಂತರ ವಿದ್ಯಾರ್ಥಿಗಳಿಗೆ ವಿಶ್ವಯೋಗ ದಿನದ ಅಂಗವಾಗಿ ಯೋಗಾಭ್ಯಾಸ ನಡೆಸಿಕೊಟ್ಟರು.

## JEE advanced 2023 rank within 10000


**DHANVITH NAYAK**
CRL RANK - 3918


**PRANAV GUJJAR**
CRL RANK - 5601


**SAMRUDH NELLI**
CRL RANK - 5769
GEN-EWS RANK - 715


**SAI LIKITH REDDY V**
OBC-NCL RANK - 3947


**AMRUTGOUDA.M.PATIL**
OBC-NCL RANK - 4117


**ARHAN A K**
OBC-NCL RANK - 7252


**SHREYAS R GOWDA**
OBC-NCL RANK - 7705


**SURYA.V**
OBC-NCL RANK - 7811


**M P PREETHAM**
OBC-NCL RANK - 8619

## ದಶಕೋಟಿ ಶ್ರೀ ರಾಮ ಮಂತ್ರ ಜಪ – 2023






ಶ್ರೀರಾಮ ಜನ್ಮ ಭೂಮಿ ತೀರ್ಥ ಟ್ರಸ್ಟ್‌ನ ವಿಶ್ವಸ್ಥ, ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥರ ಮಾರ್ಗದರ್ಶನ ಹಾಗೂ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಸುಧಾಕರ್ ಶೆಟ್ಟಿಯವರ ನಿರ್ದೇಶನದಲ್ಲಿ, ಲೋಕದಲ್ಲಿ ಶಾಂತಿ, ಸುಭೀಕ್ಷೆ, ಸಮೃದ್ಧಿ, ಸಕಲ ಜೀವರಾಶಿಗಳಿಗೂ ಶ್ರೇಯಸ್ಸು ಲಭಿಸುವಂತೆ ಕೋರಿ ಶ್ರೀ ಮಹಾಗಣಪತಿ ದೇವಸ್ಥಾನ ಹಾಗೂ ಟ್ರಸ್ಟ್‌ನ ವತಿಯಿಂದ ಗಣಿತನಗರದ ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಮುಖ್ಯ ಸಭಾಂಗಣದಲ್ಲಿ ಜ್ಞಾನಗೋಪಾಲ ಹಾಗೂ ಜ್ಞಾನಪದ್ಮ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಂದ ಸಾಮೂಹಿಕ ದಶಕೋಟಿ ಶ್ರೀ ರಾಮ ಮಂತ್ರ ಜಪ ಯಜ್ಞನಡೆಯಿತು.


**VIDWATH V**
10th (KJS)


**ADITHI B. DESAI**
II PCMC (UJS)


**VAISHNAVI ACHARYA,** I PCMB (KJS)


**VARNA V BHAT**
7th (KJS)


**BHUMIKA**
II PCMB (UJS)


**ADITHI A RAJ**
II PCMC (UJS)


**Chaitanya**
I PUC (KJS)

## ಜ್ಞಾನಸುಧಾದ ಡಾ.ಪ್ರಜ್ವಲ್ ಕುಲಾಲ್‌ರ ಸಂಶೋಧನಾ ಲೇಖನ ಅಮೇರಿಕಾದ ನೋವಾ ಸಯನ್ಸ್ ಪಬ್ಲಿಷರ್ಸ್‌ನಲ್ಲಿ ಪ್ರಕಟ

### ಭಾರತದ ಮೂವರಲ್ಲಿ ಇವರು ಓರ್ವರು



ಕಾರ್ಕಳ ಜ್ಞಾನಸುಧಾ ಪದವಿ ಪೂರ್ವಕಾಲೇಜಿನ ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಪ್ರಜ್ವಲ್ ಕುಲಾಲ್‌ರವರ ಸಂಶೋಧನಾ ಲೇಖನವು ಅಮೇರಿಕಾದ ಪ್ರತಿಷ್ಠಿತ ನೋವಾ ಸಯನ್ಸ್ ಪಬ್ಲಿಷರ್ಸ್‌ನಲ್ಲಿ ಪ್ರಕಟಗೊಂಡಿರುತ್ತದೆ. ನೀರಿನ ಶುದ್ಧೀಕರಣ ಕ್ಷೇತ್ರದಲ್ಲಿ ಸಸ್ಯಜನಕ ಪಾಲಿಸ್ಯಾಕರೈಡ್‌ಗಳನ್ನು ನ್ಯಾನೋ ಕಾಂಪೊಸಿಟ್‌ಗಳಾಗಿ ಪರಿಣಾಮಕಾರಿಯಾಗಿ ಬಳಸುವ ಸಂಶೋಧನೆಯನ್ನು ಗುರುತಿಸಿ 2022ರಲ್ಲಿ ಅಮೇರಿಕಾದ ಪ್ರತಿಷ್ಠಿತ ನೋವಾ ಸಯನ್ಸ್ ಪಬ್ಲಿಷರ್ಸ್‌ನವರು ತಮ್ಮ ವಿಜ್ಞಾನ ಸಂಬಂಧಿ ಸಂಪಾದನಾ ಕೃತಿಯ ಒಂದು ಅಧ್ಯಾಯಕ್ಕೆ ಲೇಖನಾ ಪ್ರಬಂಧವನ್ನು ಇವರಿಂದ ಅಹ್ವಾನಿಸಿದ್ದರು. ಇರಾನಿನ ಊರ್ಮಿಯಾ ವಿವಿಯ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕರಾದ ಪ್ರೋ. ಮಹಮ್ಮದ್ ಸಿರೌಸಾರುಘರ್‌ರವರ ಪ್ರಧಾನ ಸಂಪಾದಕತ್ವದಲ್ಲಿ ರೂಪುಗೊಂಡ ಕೃತಿಯಾದ 'ನ್ಯಾನೋ ಕಾಂಪೋಸಿಟ್ ಹೈಡ್ರೋಜೆಲ್ಸ್ ಆಂಡ್ ದೆಯರ್ ಎಮರ್ಜಿಂಗ್ ಅಪ್ಲಿಕೇಶನ್ಸ್' ಇದರ 13ನೇ ಅಧ್ಯಾಯವಾಗಿ ಪ್ರಜ್ವಲ್‌ರವರ ಪ್ರಬಂಧವು ಪ್ರಕಟಗೊಂಡಿರುವುದು ಹೆಮ್ಮೆಯ ಸಂಗತಿ.

ಕಾರ್ಕಳದ ಹಿರ್ಗಾನ ಗ್ರಾಮದ ಜಲಜ ಕುಲಾಲ್ ಮತ್ತು ಚಂದ್ರಶೇಖರ ದಂಪತಿಗಳ ಪುತ್ರರಾದ ಪ್ರಜ್ವಲ್ ಕುಲಾಲ್‌ರ ಸಾಧನೆಗೆ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಸುಧಾಕರ್ ಶೆಟ್ಟಿಯವರು ಹರ್ಷವ್ಯಕ್ತ ಪಡಿಸಿದ್ದು, ಜ್ಞಾನಸುಧಾ ಪರಿವಾರ ಅಭಿನಂದನೆ ಸಲ್ಲಿಸಿದೆ.

## ಜ್ಞಾನಸುಧಾದ ನಾಲ್ವರು ವಿದ್ಯಾರ್ಥಿಗಳು NITಗೆ ಪ್ರವೇಶ


**ಪ್ರಣವ್ ಗುಜ್ಜರ್**


**ಸೂರ್ಯ ವಿ**


**ಅರ್ಹನ್ ಎ.ಕೆ**


**ಚಮನ್ ಡಿ.ಪಿ**

ಇಂಜಿನಿಯರಿಂಗ್ ಪ್ರವೇಶಕ್ಕೆ ರಾಷ್ಟ್ರಮಟ್ಟದಲ್ಲಿ ಎನ್.ಟಿ.ಎ. ನಡೆಸುವ ಜೆಇಇ ಮೈನ್ ಪರೀಕ್ಷೆಯ ಮೂಲಕ ಕಾರ್ಕಳ ಜ್ಞಾನಸುಧಾದ 3 ವಿದ್ಯಾರ್ಥಿಗಳು ಎನ್.ಐ.ಟಿ.ಕೆ. ಸುರತ್ಕಲ್‌ಗೆ ಹಾಗೂ ಒಬ್ಬ ವಿದ್ಯಾರ್ಥಿ ಎನ್.ಐ.ಟಿ ಕ್ಯಾಲಿಕಟ್‌ಗೆ ಪ್ರವೇಶ ಪಡೆದಿರುತ್ತಾರೆ. ವಿದ್ಯಾರ್ಥಿಗಳಾದ ಪ್ರಣವ್ ಗುಜ್ಜರ್ (ಸಿ.ಎಸ್), ಸೂರ್ಯ ವಿ (ಮೆಕ್ಯಾನಿಕಲ್), ಮತ್ತು ಅರ್ಹನ್ ಎ.ಕೆ (ಸಿವಿಲ್) ಎನ್.ಐ.ಟಿ.ಕೆ ಸುರತ್ಕಲ್‌ನಲ್ಲಿಯೂ ಹಾಗೂ ಚಮನ್ ಡಿ.ಪಿ ಎನ್.ಐ.ಟಿ ಕ್ಯಾಲಿಕಟ್‌ನಲ್ಲಿ ಬಿ.ಆರ್ಕ್‌ಗೆ ದಾಖಲಾತಿ ಹೊಂದಿರುತ್ತಾರೆ.

## ತನು-ಭೂಮಿ-ಯೋಗ




ಕಾರ್ಕಳ ಜ್ಞಾನಸುಧಾದ ಮುಖ್ಯ ಸಭಾಂಗಣದಲ್ಲಿ ನಡೆದ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಗಿನ್ನಿಸ್ ದಾಖಲೆ ಖ್ಯಾತಿಯ ಅಂತರಾಷ್ಟ್ರೀಯ ಯೋಗ ಪಟು ಯೋಗರತ್ನ ಕು.ತನುಶ್ರೀ ಪಿತ್ರೋಡಿ ಇವರಿಂದ 'ತನು-ಯೋಗ-ಭೂಮಿ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ತನ್ನ ಯೋಗ ಪ್ರದರ್ಶನದ ಮೂಲಕ ತಾಯ್ನೆಲದ ಮಹತ್ವವವನ್ನು ಸಾರುವ ರೂಪಕವನ್ನು ಪ್ರಸ್ತುತಪಡಿಸಿದರು. ಇದೇ ಸಂದರ್ಭ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವತಿಯಿಂದ ಸನ್ಮಾನಿಸಲಾಯಿತು.

## ಸಂಪಾದಕೀಯ

ಪ್ರಿಯ ಓದುಗ,

ಮುಳುಗದಿರು ಜೀವನದ ತೆರೆಯ ಮೇಲೀಜುತಿರು । ಒಳಿತನಾಗಿಸು, ಕೊಡುತ ಕೊಳುತ ಸಂತಸವ ।
ಕಳವಳಂಬಡದೆ ನಡೆ ಕಡೆಯ ಕರೆ ಬಂದುದು। ಮಿಳಿತನಿರು ವಿಶ್ವದಲಿ – ಮಂಕುತಿಮ್ಮ.

ಕವಿ ಡಿ.ವಿ.ಜಿ. ಯವರ ಈ ಮೇಲಿನ ಕಗ್ಗದ ಪ್ರತಿ ಸಾಲುಗಳಿಗೆ ತಕ್ಕುದಾಗಿ ಬದುಕಿ ತೋರಿದವರು ನಮ್ಮ ಸಂಸ್ಥಾಪಕರಾದ ದಿ.ಗೋಪ ಶೆಟ್ಟಿಯವರು. "ಶರಣರ ಗುಣ ಮರಣದಲ್ಲಿ ಕಾಣು" ಎಂಬಂತೆ, ತನ್ನ ಬದುಕಿನ ಕೊನೆಯ ಕ್ಷಣದವರೆಗೂ ಇತರರಿಗಾಗಿ ಚಿಂತಿಸಿದವರು ಅವರು. ಅಜೆಕಾರ್ ಪದ್ಮಗೋಪಾಲ್ ಟ್ರಸ್ಟ್ ಪ್ರತಿ ವರ್ಷವೂ ಅವರ ಹುಟ್ಟು ಹಬ್ಬವಾದ ಆಗಸ್ಟ್ 21 ರಂದು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಅರ್ಥಪೂರ್ಣವಾಗಿ ಆಚರಿಸುತ್ತಿದೆ. ಕಳೆದ ವರ್ಷ 113 ಯೂನಿಟ್ ರಕ್ತದಾನದಿಂದ ರಕ್ತ ಸಂಗ್ರಹಿಸಿದಲ್ಲದೆ ಸ್ಥಳೀಯ ಆಶಾ ಕಾರ್ಯಕರ್ತೆಯರನ್ನು ಗೌರವಿಸುವ ಮೂಲಕ ಸಂಸ್ಥಾಪಕರ ದಿನವನ್ನು ಆಚರಿಸಲಾಗಿತ್ತು. ಈ ವರ್ಷವೂ ನಾವು ರಕ್ತದಾನ ಶಿಬಿರ, ರೋಗಿಗಳಿಗೆ ಸಹಾಯಧನ ವಿತರಣೆ, ಶಿರ್ವದ "ವಿಶ್ವಾಸದ ಮನೆ" ಹಾಗೂ ರಂಗನ ಪಲ್ಕೆಯ "ಹೊಸ ಬೆಳಕು" ಸಂಸ್ಥೆಗಳಿಗೆ ಆರ್ಥಿಕ ನೆರವು, ನೆರೆಯ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಅಡುಗೆ ಸಹಾಯಕರುಗಳಿಗೆ ಸನ್ಮಾನವನ್ನು ಏರ್ಪಡಿಸಿರುತ್ತೇವೆ.

ಸಂಸ್ಥಾಪಕರ ಶುಭಾಶೀರ್ವಾದದ ಫಲವಾಗಿ ಈ ವರ್ಷವೂ ನಮ್ಮ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಇಂಜಿನಿಯರಿಂಗ್‌ನಲ್ಲಿ ಈರ್ವರು ವಿದ್ಯಾರ್ಥಿಗಳು ಈಗಾಗಲೇ ಪ್ರತಿಷ್ಠಿತ **IIT.** ಖರಗ್‌ಪುರದಲ್ಲಿ ಪ್ರವೇಶ ಗಳಿಸಿದ್ದಾರೆ. **KCET** ಇಂಜಿನಿಯರಿಂಗ್‌ನಲ್ಲಿ ಹದಿಮೂರು ವಿದ್ಯಾರ್ಥಿಗಳು ಒಂದು ಸಾವಿರದೊಳಗಿನ ರ್‍ಯಾಂಕ್ ಗಳಿಸಿದ್ದಾರೆ. ಪ್ರಥಮ ಹಂತದಲ್ಲಿ 91 ವಿದ್ಯಾರ್ಥಿಗಳು NEET ನ ಮೂಲಕ MBBS ಪ್ರವೇಶ ಗಳಿಸಿದ್ದಾರೆ.

ತಿಂಗಳಿಗೊಮ್ಮೆ ನಡೆಯುವ "ಮೌಲ್ಯ ಸುಧಾ" ಕಾರ್ಯಕ್ರಮ, 'ನ್ಯೂಸ್ ಕಾರ್ಕಳ" ದ ಮೂಲಕ ಸಾವಿರಾರು ವೀಕ್ಷಕರನ್ನು ತಲುಪುವುದರೊಂದಿಗೆ, ನಮ್ಮ ಬದುಕಿನಲ್ಲಿ ಇರಲೇ ಬೇಕಾದ ಮೌಲ್ಯಗಳ ಬಗ್ಗೆ ಒತ್ತು ನೀಡುತ್ತಿದೆ. ಸಂಸ್ಥೆಯ ಆವರಣಲ್ಲಿ ನಡೆದ ಹಲವಾರು ಕಾರ್ಯಕ್ರಮಗಳ ಬಗ್ಗೆ ಪಕ್ಷಿನೋಟವನ್ನು ಈ ಸಂಚಿಕೆಯಲ್ಲಿ ಬೀರಿದ್ದೇವೆ.

ಸಮಸ್ತ "ಜ್ಞಾನಸುಧಾ" ಬಳಗದ ಮೇಲೆ ಸಂಸ್ಥಾಪಕರ ಶುಭಾಶೀರ್ವಾದವಿರಲಿ. ನಮ್ಮ ಸಂಸ್ಥೆಯಿಂದ ಇನ್ನಷ್ಟು ಸಮಾಜಮುಖಿ ಕಾರ್ಯಕ್ರಮಗಳನ್ನು ಆವರಣದ ಶ್ರೀ ಮಹಾಗಣಪತಿ ದೇವರು ಹಾಗೂ ನಾಗದೇವರು ಮಾಡಿಸುವಂತಾಗಲಿ ಎನ್ನುವ ಶುಭಹಾರೈಕೆಗಳೊಂದಿಗೆ,

**ಸಂಪಾದಕರು.**

**ಸಂಪಾದಕರು**

'ಜ್ಞಾನಸುಧಾ' ಪತ್ರಿಕೆ, ಗಣಿತ ನಗರ, ಕುಕ್ಕುಂದೂರು
ಕಾರ್ಕಳ – 575117, ಉಡುಪಿ ಜಿಲ್ಲೆ

ಸಂದೇಶ
<JNANASUDHA><NAME><PLACE>
<MESSAGE>
to
9019736528

Ph: 08258-298455, 298655
Email:jnanasudha@gmail.com

**'ನಹಿ ಜ್ಞಾನೇನ ಸದೃಶಂ' – ಜ್ಞಾನಸುಧಾದ ನಡಿಗೆ ಜ್ಞಾನದೆಡೆಗೆ**

Printed & Published by AJEKAR PADMA GOPAL EDUCATION TRUST, 'Padma Gopal', Joduraste, Karkala - 576 117
Editorial Board : Principal, KJSPUC & KJSEMHS, Mrs. Jyothi Padmanabha, Mr. Manjunath. *Designed* @ RAJ Graphics, Hirebettu
Editorial Office : KARKALA JNANASUDHA P.U. COLLEGE, GANIT NAGAR, KUKKUNDOOR, KARKALA - 576 117, Email : jnanasudha@gmail.com Ph: 08258-298455, 298655